ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹರಿಹರ ಚಿತ್ರಿಸಿದ ದಲಿತ ಶರಣರು

ಪ್ರೊ. ಎಸ್.ಎಸ್. ಹಿರೇಮಠ



ಹರಿಹರ ಚಿತ್ರಿಸಿದ ದಲಿತ ಶರಣರು

ಪ್ರೊ. ಎಸ್. ಎಸ್. ಹಿರೇಮಠ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

HARIHARA CHITRISIDA DALITA SHARANARU
By Prof. S.S.Hiremath. Published by The Director, Prasaranga Kannada University, Hampi, Vidyaranya, Kamalapura 583 221, Pp: iv + 21, Rs.5-00, First Impression: 1998

ಮಂಟಪ ಮಾಲೆ ೪೪

© ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೮

ಪ್ರಕಾಶಕರು
ಪ್ರೊ. ಎ. ವಿ. ನಾವಡ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

ಮುಖಪುಟ ವಿನ್ಯಾಸ
ಕೆ.ಕೆ.ಮಕಾಳಿ

ಅಕ್ಷರ ಸಂಯೋಜನೆ
ಯಾಜಿ ಗ್ರಾಫಿಕ್ಸ್, ಹೊಸಪೇಟೆ

ಬೆಲೆ ರೂ. ೫.೦೦

ಮುದ್ರಣ
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಗದಗ

*

ದೇಸಿಯೊಳ್ ಪುಗುವುದು

ಡಾ. ಎಂ. ಎಂ. ಕಲಬುರ್ಗಿ
ಕುಲಪತಿಗಳು

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿ ಎನ್ನುವುದು ಸಮೂಹಸಮ್ಮತ ಜೀವನಪದ್ಧತಿಯಾಗಿದೆ. ಕನ್ನಡಿಗರ ಇಂತಹ ಜೀವನ ಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವ ನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶೀ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶಗಳನ್ನು ಗುರುತಿಸುವ, ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರ ವಹಿಸಿ ತುಂಬಿಕೊಳ್ಳುವ ಕೆಲಸ ನಮ್ಮಲ್ಲಿ ನಡೆಯಬೇಕಾಗಿದೆ. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಸ್ಥಾನಿಕದಲ್ಲಿ ಬದುಕಿಸಬೇಕಾಗಿದೆ, ಜಾಗತಿಕದಲ್ಲಿ ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶ

ಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, 'ಎಲ್ಲ ರಸ್ತೆಗಳು ರೋಮ್‌ದ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ "ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರಮಾಧ್ಯಮ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ-ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ 'ಪುಸ್ತಕಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತಂದಿದೆ. ಈ ನಿಟ್ಟಿನಲ್ಲಿ ಪ್ರಕಟವಾದ ಮಂಟಪ ಮಾಲೆಯ ಪುಸ್ತಕ 'ಹರಿಹರ ಚಿತ್ರಿಸಿದ ದಲಿತ ಶರಣರು.'

ಪ್ರೊ.ಎಸ್.ಎಸ್.ಹಿರೇಮಠ ಅವರು 'ಹರಿಹರ ಚಿತ್ರಿಸಿದ ದಲಿತ ಶರಣರು.' ಕುರಿತು ಮಂಟಪಮಾಲೆ ಉಪನ್ಯಾಸವನ್ನು ನೀಡಿದ್ದಾರೆ. ಇದಕ್ಕಾಗಿ ಅವರಿಗೆ ಕನ್ನಡ ವಿಶ್ವವಿದ್ಯಾಲಯ ಕೃತಜ್ಞವಾಗಿದೆ.

ಹರಿಹರ ಚಿತ್ರಿಸಿದ ದಲಿತ ಶರಣರು

ಕನ್ನಡ ವಿಮರ್ಶಾಲೋಕ ಮಹಾಕವಿಗಳೆಂದು ಗುರುತಿಸಿದ್ದು ಈ ನಾಲ್ವರನ್ನು: ಪಂಪ, ಹರಿಹರ, ಕುಮಾರವ್ಯಾಸ, ರತ್ನಾಕರವರ್ಣಿ. ತುಂಡರಸರು ಮತ್ತು ಚಕ್ರವರ್ತಿಗಳು ಸರ್ವಾಧಿಕಾರಿಗಳಾಗಿ ಆಳುತ್ತಿದ್ದ ಸಾಮಂತಶಾಹಿ ಕಾಲಾವಧಿಯಲ್ಲಿ ಮೂವರಿಗೆ 'ಪ್ರಭು' ಕೇಂದ್ರಿತ ಕಥಾನಕವು ಅನಿವಾರ್ಯವೆಂದು ತೋರಿದರೆ; ಹರಿಹರನಿಗೆ ಮಾತ್ರ ಶಿವಭಕ್ತರ ನೆಪದಲ್ಲಿ ಶ್ರೀ ಸಾಮಾನ್ಯನೇ ಕೇಂದ್ರುವಾಗುತ್ತಾನೆ. ಭಾರತದ ಭಕ್ತಿ ಚಳುವಳಿಯ ಹಿನ್ನೆಲೆಯಲ್ಲಿ 'ಭಕ್ತಕವಿ'ಯಾದ ಹರಿಹರನ ಭವ್ಯಪ್ರತಿಭೆಯಿಂದ ಜನಸಾಮಾನ್ಯರು ಅದರಲ್ಲೂ ದಲಿತರು ಹೇಗೆ ಕಂಡರಣೆಗೊಂಡರೆಂದು ಹುಡುಕುವುದು ಕುತೂಹಲದ ಕೆಲಸವೇ. ಪ್ರಭುನಿಷ್ಠೆ ಮತ್ತು ಮತನಿಷ್ಠೆಗಳಿಂದ ಪೀಡಿತವಾಗಿರುವ ಕನ್ನಡ ಸಾಹಿತ್ಯಪರಂಪರೆಯಲ್ಲಿ ಅಸ್ಪೃಶ್ಯರು ಚಿತ್ರಣಗೊಂಡುದಿಲ್ಲ. ಆದರೆ ಭಕ್ತ ಚಳುವಳಿಯಿಂದ ದಲಿತರನ್ನೊಳಗೊಂಡು ಎಲ್ಲ ಜಾತಿ ಜನಗಳೂ ಸಾಹಿತ್ಯರಂಗಕ್ಕೇರುವಂತಾದುದು ಗಮನಾರ್ಹ ಅಂಶ. ದೇಶದಲ್ಲೇ ಮೊಟ್ಟ ಮೊದಲು ತಮಿಳುನಾಡಿನಲ್ಲಿ ಹುಟ್ಟಿದೆ ಎಂದು ಹೇಳಲಾಗಿರುವ 'ಭಕ್ತಿಪಂಥ' ಕನ್ನಡನಾಡಿನಲ್ಲಿ ಸಾಮಾಜಿಕ ಆಂದೋಲನದ ರೂಪದಲ್ಲಿ ಪ್ರಕಟಗೊಂಡದ್ದು ೧೨ನೇ ಶತಮಾನದಲ್ಲಿ. ಹರಿಹರನ ಅಧ್ಯಯನ, ಈ ಆಂದೋಲನ ಬಗೆಗಿನ ಈವರೆಗಿನ ನಮ್ಮ ಕಲ್ಪನೆಗಳನ್ನು ಸಾಕಷ್ಟು ಬದಲಿಸುತ್ತದೆ. ಇದು ಸ್ವಾರಸ್ಯಕರವಾದ ಚರ್ಚೆಯಾದರೂ ಈ ಸಂದರ್ಭಕ್ಕೆ ಹೊರತಾದುದರಿಂದ ಅದನ್ನಿಲ್ಲಿ ಹಿಗ್ಗಿಸಲಾರೆ.

ಒಂದು ಸೀಮಿತ ಅರ್ಥದಲ್ಲಿ ಹರಿಹರ ಜನತೆಯ ಕವಿ. ಅವನ ಜನಪರ ನಿಲುವು ವ್ಯವಸ್ಥೆಯನ್ನು ಎದುರು ಹಾಕಿಕೊಳ್ಳುವುದನ್ನು ಅನಿವಾರ್ಯವಾಗಿಸುತ್ತದೆ. ಆ ಕಾಲದ ಸಾಮಾಜಿಕಾರ್ಥಿಕ ವೈರುಧ್ಯಗಳನ್ನು ಹೆಚ್ಚು ನಿಖರವಾಗಿ ಸ್ಫುಟವಾಗಿ ಚಿತ್ರಿತವಾಗುವ ಸಂದರ್ಭವೊದಗುತ್ತದೆ. ಇದು ಕಾಲದ ಕಟು ವಾಸ್ತವಗಳನ್ನು ಮತ್ತು ನಿಜಗಳನ್ನು ಅನಾವರಣಗೊಳಿಸುವ ಅನಿವಾರ್ಯ ಕ್ರಿಯೆ ಕೂಡ. ಕವಿ ಕಾಲದ ಮತ್ತು ಪ್ರದೇಶ ಸ್ಥಿತಿಯ ಕೂಸಾದ್ದರಿಂದ ತನ್ನಳತೆಗೆ ಸಿಕ್ಕಷ್ಟು ಹಿಡಿದಿಡಬಲ್ಲ. ಇದು ಅವನ ಇತಿಮಿತಿ. ಹರಿಹರ ಚಿತ್ರಿಸಿದ ದಲಿತರ ಕುರಿತ ವಿವರಗಳಲ್ಲೂ ಹೀಗೆಯೇ.

ಚರಿತ್ರೆ ಮತ್ತು ಸಾಹಿತ್ಯಚರಿತ್ರೆಗಳಲ್ಲಿ ಅವ್ಯಕ್ತವಿರುವ ದಲಿತರ ಬಗೆಗೆ

ಸಂವೇದನಾಶೀಲನಾದ ಹರಿಹರ ಒಳನೋಟಗಳನ್ನೇನಾದರೂ ನೀಡುತ್ತಾನೆಯೇ? ಇವನಲ್ಲಿ ದಲಿತರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಬದುಕು ಯಥಾವತ್ತಾಗಿ ಬಂದಿದೆ ಎಂದು ಊಹಿಸುವುದು ಸರಿಯಲ್ಲ. ಕವಿ ನಂಬಿದ ಧರ್ಮಕ್ಕೆ ಮತಾಂತರಗೊಂಡ ದಲಿತರ ಬಗ್ಗೆ ಮಾತ್ರ ಹರಿಹರನ ಒಲವು ಇರುವುದರಿಂದ ಸಹಜವಾಗಿ ಒಂದು ಮಿತಿ ಉಂಟಾಗುತ್ತದೆ. ಸಾಹಿತ್ಯಕ್ಕೇನೆ ಒಂದು ನಿರ್ದಿಷ್ಟ ಚೌಕಟ್ಟು ಇರುತ್ತದಲ್ಲವೇ ?

ಈ ಇಬ್ಬಗೆಯ ಮಿತಿಗೊಳಪಟ್ಟು ಹರಿಹರ ಕಟ್ಟಿಕೊಡುವ ದಲಿತರ ಬದುಕನ್ನು ಗ್ರಹಿಸುವುದು ಈ ಬರಹದ ಉದ್ದೇಶ.

ಶಿವಭಕ್ತರಲ್ಲಿ ಒಬ್ಬನೆಂದು ಮಾತ್ರ ದಲಿತನನ್ನು ಗ್ರಹಿಸುವ ಹರಿಹರ ಅಸ್ಪೃಶ್ಯತೆ, ಕುಲಸೂತಕ ಮೊದಲಾದ ಅನನ್ಯ ದಲಿತ ಸ್ಥಿತಿಯನ್ನು ಅನಿವಾರ್ಯ ಪ್ರಸಂಗಗಳಲ್ಲಿ ವಿವರಿಸಬೇಕಾಗುತ್ತದೆ. ದಲಿತನಾದುದರಿಂದ ಉಂಟಾದ ಸಾಮಾಜಿಕ ಅಲ್ಲೋಲ ಕಲ್ಲೋಲಗಳನ್ನು ವರ್ಣಿಸಬೇಕಾಗುತ್ತದೆ. ಆ ಪ್ರಸಂಗಗಳೇ ನಮಗೆ ಒಂದಿಷ್ಟು ಮಾಹಿತಿಗಳನ್ನು ಒದಗಿಸುವ ಆಕರಗಳಾಗುತ್ತವೆ.

ಸಾಮಂತಶಾಹಿ ಸಮಾಜದಲ್ಲಿ ಭೂಮಿಯೇ ಸಂಪತ್ತಿನ ಮೂಲ ಆಕರ. ದಲಿತರು ಕೃಷಿ ಕೂಲಿಕಾರರು. ಆ ಕಾಲದಲ್ಲಿ ಚರ್ಮದ ವೃತ್ತಿ, ಕೂಲಿಗಾರಿಕೆ ಮತ್ತು ಇತರ ಸೇವಾವೃತ್ತಿಗಳನ್ನು ಮಾತ್ರ ದಲಿತರು ಅವಲಂಬಿಸಬೇಕಿತ್ತು. ಸಮಾಜದ ನೈಜ ಗ್ರಹಿಕೆಗೆ ಅನಿವಾರ್ಯವಾಗಿರುವ ಮಾನವರ ನಡುವಿನ ಉತ್ಪಾದನಾ ಸಂಬಂಧದಲ್ಲಿ ದಲಿತರು ಮತ್ತು ಇತರರ ನಡುವಿನ ಪ್ರಶ್ನೆ ಪ್ರಮುಖವಾಗುತ್ತದೆ: ಈ ಆರ್ಥಿಕ ರಚನೆಯ ಆಧಾರದಲ್ಲಿಯೇ ಸಾಹಿತ್ಯ ಕಲೆ ಮೊದಲಾದ ಸಾಂಸ್ಕೃತಿಕ ಬದುಕು ರೂಪುಗೊಳ್ಳುತ್ತದಾದ್ದರಿಂದ.

ದಲಿತರು ಮತ್ತು ಇತರರ ನಡುವಿನ ಸಂಬಂಧ ಹುಟ್ಟುಹಾಕಿದ ವೈರುಧ್ಯ. ಈ ವೈರುಧ್ಯದಿಂದಾಗಿ ಉಂಟಾದ ಸಂಘರ್ಷ ; ಸಂಘರ್ಷದಿಂದಾಗಿ ಕಾಣಬರುವ ಸಾಮಾಜಿಕ ಪ್ರಗತಿಯ ಸ್ವರೂಪ ಇವು ನಮ್ಮ ಚಿಂತನೆಯ ಪ್ರಧಾನ ತಾತ್ವಿಕ ನೆಲೆಯಾಗಬೇಕು. ಚರಿತ್ರೆಯ ಗತಿಶೀಲತೆಯ ಮೂಲತತ್ವವೇ ಇದು.

ವರ್ಗ ನೆಲೆ : ಮಾದಾರ ಚನ್ನಯ್ಯ

'ಶಿವ' ಎನ್ನುವುದು ಒಂದು ಭ್ರಮೆ, ಸುಳ್ಳು. ಅದು ನಿಮಿತ್ತಾಂಶ. ಆದರೂ ಹರಿಹರಾದಿ ಕವಿಗಳಲ್ಲಿ ಇದು ಒಂದು ನಿರ್ಣಾಯಕ ಪಾತ್ರ. ಇದನ್ನು ಒಂದು ನೈತಿಕ ಮಾನದಂಡ ಎಂದು ಗ್ರಹಿಸಿ ಅರ್ಥೈಸಿದಾಗ ಕೆಲವು ಸಮಸ್ಯೆ ಬಗೆಹರಿಯಬಹುದು. ಉದಾ: ಮಾದಾರ ಚನ್ನಯ್ಯನ ರಗಳೆಯಲ್ಲಿ 'ಶಿವ' ಮಹಾರಾಜ ಚೋಳನಲ್ಲಿ ಮೃಷ್ಟಾನ್ನ ಉಣ್ಣದೇ 'ದಾಸ'ನಾದ ಮಾದಾರ ಚನ್ನಯ್ಯನಲ್ಲಿ ಅಂಬಲಿ ಊಟ ಮಾಡುತ್ತಾನೆ. 'ಊಟ' ಮಾಡುವುದು ಶ್ರೇಣೀಕೃತ ಜಾತಿವ್ಯವಸ್ಥೆಯ ಜಡಸ್ಥಿತಿಗೆ ಆಘಾತವನ್ನುಂಟುಮಾಡುವ ಪ್ರಧಾನಾಂಶ. 'ಅಂತರ್‌ಜಾತಿ' ವಿವಾಹ ಇಂಥ ಇನ್ನೊಂದು ಬಾಂಬು. ಮೇಲುವರ್ಗ- ವರ್ಣಗಳೆರಡನ್ನೂ

ಏಕಕಾಲಕ್ಕೆ ಪ್ರತಿಭಟಿಸಿ ನಿಲ್ಲುವ ಧೈರ್ಯ ಇಲ್ಲಿಯ ಸವಾಲು. ಅಸ್ಪೃಶ್ಯ ವರ್ಣಕ್ಕೆ ಸೇರಿದ ಚನ್ನಯ್ಯ ಶೋಷಿತ ವರ್ಗೀಯ ಊಳಿಗಮಾನ್ಯ ಕಾಲದ ಶ್ರೇಣೀಕೃತ ಸಮಾಜದ ಅತ್ಯಂತ ಕೆಳಗಿರುವವ: ತುಳಿತಕ್ಕೆ ಒಳಗಾಗಿರುವಂಥವ. ಈ ಸ್ಥಿತಿಯೇ ಅವನನ್ನು ಗುಪ್ತ ಭಕ್ತನನ್ನಾಗಿಸಿರುವಂತಿದೆ. ಅಂದರೆ ಗುಪ್ತನಾಗಿರಬೇಕೆಂಬ ಸ್ಥಿತಿ ಅಂದಿನ ಸಾಮಾಜಿಕಾರ್ಥಿಕ ಒತ್ತಡದ ಕಾರಣದಿಂದಲೇ. ಚಕ್ರವರ್ತಿ ಮತ್ತು ದಾಸ ಇಬ್ಬರೂ ಒಂದು ನೆಲೆಗೆ ಬಂದು ನಿಲ್ಲುವುದೇ ಈ ಶಿವಭಕ್ತಿಯಿಂದಾಗಿ. ಚಕ್ರವರ್ತಿ ಅದನ್ನು ವೈಭವ ಆಡಂಬರದಿಂದ ಪ್ರದರ್ಶಿಸಬಲ್ಲ. ಅದನ್ನು ಬಹಿರಂಗದಲ್ಲಿ ಯಾವ ಕಾರಣಕ್ಕೂ ತೋರ್ಪಡಿಸಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾನೆ ಚನ್ನಯ್ಯ. ಎರಡು ಅತಿಗಳನ್ನು ಅಥವಾ ವಿರೋಧಗಳನ್ನು ಒಂದೆಡೆ ತಂದುದು 'ಶಿವಭಕ್ತಿ'. ವೈರುಧ್ಯಗಳು ಸಮೀಪವಾದಾಗ ಸಂಘರ್ಷ ಅನಿವಾರ್ಯ. ಇಲ್ಲಿ ಹಳೆಯದು ನಾಶವಾಗಬೇಕು, ಹೊಸದರ ಸೃಷ್ಟಿಯಾಗಬೇಕೆಂಬುದೇ 'ಡೈಲೆಕ್ಟಿಕ್ಸ್'.

ಊಳಿಗಮಾನ್ಯ ಕಾಲದ ರಾಜಕೀಯಾರ್ಥಿಕ ವ್ಯವಸ್ಥೆಯ ಪ್ರಧಾನ ವೈರುಧ್ಯಾತ್ಮಕ ವರ್ಗಗಳೇ ರಾಜ-ದಾಸ. ಅವರ ನಡುವೆ ಸಂಘರ್ಷವೇರ್ಪಟ್ಟಾಗ ಏನಾಗುತ್ತದೆಂಬುದನ್ನು ೧೨ನೇ ಶತಮಾನದ ಚಳುವಳಿಯೇ ತೋರಿಸಿಕೊಟ್ಟಿದೆ. ಆದರೆ ಹರಿಹರನ ಕಾಲದಷ್ಟೊತ್ತಿಗೆ ಸಂಘಟನಾತ್ಮಕ ಸಂಘರ್ಷಕ್ಕೆ ಅವಕಾಶವಿರಲಿಲ್ಲ. ಹರಿಹರನ ಬದುಕಿನ ಬಗೆಗಿರುವ ಐತಿಹ್ಯಗಳಂತೆ ಆತ ಹೊಯ್ಸಳ ಅರಸರ ಆಸ್ಥಾನದ ಕರಣಿಕ. ಬಸವಣ್ಣನೂ ಮೊದಲು ಕರಣಿಕನಾಗಿದ್ದವನೇ. ಆದರೆ ಈ ಹೋಲಿಕೆ ಇಷ್ಟಕ್ಕೇ ಸೀಮಿತ. ಹರಿಹರ ಆಸ್ಥಾನವನ್ನು ಬಿಟ್ಟು ವಿರಾಗಿಯಂತೆ ಹಂಪಿಯಲ್ಲಿ ನೆಲೆಗೊಳ್ಳುತ್ತಾನೆ. 'ಭಕ್ತಿ'ಯ ಸಂಘಟಿತ ಸ್ವರೂಪ ಬಸವಣ್ಣನ ಕಾಲದ ಪ್ರಧಾನ ನೆಲೆಯಾದರೆ ; ಭಕ್ತಿಯ ವೈರಾಗ್ಯ ಸ್ವರೂಪ ಹರಿಹರನ ಕಾಲದ ನೆಲೆಯಾಗಿದೆ. ತನ್ನ ಬದುಕು ಕಲಿಸಿದ ಪಾಠದಿಂದ ಹರಿಹರ ಬೆಳೆಸಿಕೊಂಡ ದೃಷ್ಟಿಕೋನಕ್ಕೆ ಅನುಗುಣವಾಗಿ ಆತ ತನ್ನ ಕೃತಿಗಳನ್ನು ರಚಿಸುವಾಗ ಸಹಜವಾಗಿ ವ್ಯಕ್ತಿಗಳ ಒಂಟಿ ಸಾಹಸಗಳತ್ತ ಗಮನವೀಯುತ್ತಾನೆ. ಚಳುವಳಿಯ ಸಮಗ್ರ ಸ್ವರೂಪದ ಅತ್ಯಗಾಧ ಶಕ್ತಿ-ಸಾಮರ್ಥ್ಯವನ್ನು ಗ್ರಹಿಸಲಿಲ್ಲ. ಹೀಗಾಗಿ ಚಳುವಳಿಕಾರರ ಬಿಡಿ ಬಿಡಿ ಚಿತ್ರಣಗಳಷ್ಟೇ ತನ್ನನ್ನು ಸೀಮಿತಗೊಳಿಸುತ್ತಾನೆ. ಈ ಸಂದರ್ಭದಲ್ಲಿ ಹರಿಹರ ವರ್ಗ-ವರ್ಣ ಮಿತಿಯನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಮಾದರ ಚನ್ನಯ್ಯನ ರಗಳೆಯಲ್ಲಿ ವ್ಯಕ್ತವಾಗುತ್ತಿರುವುದೂ ಇದೇ ಇತಿಮಿತಿ. ಮಾದರ ಚನ್ನಯ್ಯನ ಜೀವನ ಚರಿತ್ರೆಯೇ ತಿಳಿದಿಲ್ಲ. ಹರಿಹರನಂಥ ಲೇಖಕರು ಕಟ್ಟಿಕೊಡುವ ಚರಿತ್ರೆಯ ಮೂಲಕ ನಿಜಗಳನ್ನು ನಾವು ಊಹಿಸಿಕೊಳ್ಳಬೇಕಷ್ಟೇ. ಇದು ತೃಪ್ತಿಕೊಡುವ ಕೆಲಸವಲ್ಲವಾದರೂ ಬೇರೆ ದಾರಿಯೇ ಇಲ್ಲ.

ವರ್ಗ ವರ್ಣ ವೈರುಧ್ಯ ಬಸವಾದಿ ಶರಣರ ಕಾಲದಲ್ಲಿ ಸಂಘರ್ಷಕ್ಕೆಡೆಮಾಡಿಕೊಟ್ಟಿದೆ. ಇದು ಅತ್ಯಂತ ಸಹಜ ಕೂಡ. ಆ ಕಾಲದ ಸ್ವರೂಪಕ್ಕನುಗುಣವಾಗಿ ಶರಣರಿಗೆ ಸೋಲುಂಟಾದರೂ ಚಳುವಳಿ ಮಾಡಿದ ಪ್ರಭಾವ ಅಗಾಧವಾಗಿತ್ತು. ಇದು ಅದರ ಗೆಲುವೇ

ಎನ್ನಬೇಕು. ಆದರೆ ಮುಂಬರುವ ಕಾಲ ಘಟ್ಟಗಳಲ್ಲಿ ಈ ಪ್ರಭಾವದಿಂದುಂಟಾದ ಪರಿಣಾಮ ಇತ್ಯಾತ್ಮಕವಾಗೇನೂ ಇರಲಿಲ್ಲ. ಆಳುವ ವರ್ಗಗಳ ಜತೆ ವೀರಶೈವ ಧರ್ಮ ಸಾಂಸ್ಥಿಕ ಸ್ವರೂಪದಲ್ಲಿ ಸ್ಥಾಪಿತವಾಗತೊಡಗಿತು. ಯಾವ ಭಕ್ತಿ ಸಂಘಟಿತ ಹೋರಾಟದ ಸ್ಫೂರ್ತಿಸೆಲೆಯಾಗಿತ್ತೋ ಅದು ಈಗ ವ್ಯಕ್ತಿಯ ಸಾಹಸ ಪ್ರವೃತ್ತಿಯ ಸಾಧನವಾಗುತ್ತದೆ. ಅವಧೂತಿಕೆಯ ನಿಗೂಢರೂಪದಲ್ಲಿ ಅದು ಸ್ಥಳೀಯ ನೆಲೆಗಳನ್ನು ಕಂಡುಕೊಳ್ಳುತ್ತದೆ.

'ಅಸ್ಪೃಶ್ಯತೆ', ರಕ್ತಸಂಬಂಧ ಮತ್ತು ಸಹಭೋಜನವನ್ನು ನಿರಾಕರಿಸುವಲ್ಲಿ ಅಸ್ತಿತ್ವದಲ್ಲಿದೆ. ದಲಿತ ಚನ್ನಯ್ಯನ ರಗಳೆಯಲ್ಲಿ ಸಹಭೋಜನ ಸಮಸ್ಯೆಯನ್ನು ಎತ್ತಿಕೊಂಡು ವೈದಿಕಶಾಹಿಯ ಮಡಿಗೆ ಪೆಟ್ಟುಕೊಡುತ್ತಾನೆ ಹರಿಹರ. ದ್ವಿಧಾ ಭಾವದಿಂದ ಪ್ರಾರಂಭವಾಗುವ ಚನ್ನಯ್ಯನ ರಗಳೆ ಅಂತ್ಯಗೊಳ್ಳುವುದು ಏಕೀಭಾವದಿಂದ. ಶಿವ ಚನ್ನಯ್ಯನೊಡನೆ ಉಂಡುದರಿಂದ ವೈದಿಕ ಪರಂಪರೆ ಹಾಳಾಯಿತು, ನುಚ್ಚುನೂರಾಯಿತು ಎಂದು ರಗಳೆಯನ್ನು ಉದ್ಘಾಟಿಸುವ ವೃತ್ತ ಸಾರುತ್ತದೆ. ಅಂತ್ಯದಲ್ಲಿ ರಗಳೆ 'ಚೆನ್ನ ಹಂಪೆಯ ವಿರುಪಾಕ್ಷನಿಂತೊಪ್ಪಿದಂ' ಎನ್ನುತ್ತದೆ. ಶಿವ ಬೇರೆಯಲ್ಲ ಚನ್ನಯ್ಯ ಬೇರೆಯಲ್ಲ, ಎಂಬ ನಿಲುವು ಇದು. ಚನ್ನನ ಮಗನೆಂದು ಹಂಪೆಯ ವಿರುಪಾಕ್ಷ ತನ್ನನ್ನು ರಕ್ಷಿಸಲಿ ಎಂಬ ಕವಿಯ ಬೇಡಿಕೆ ಕೊನೆಯ ಕಂದ ಪದ್ಯದಲ್ಲಿದೆ. ಅಲ್ಲಿರುವುದು ಚನ್ನನ ನಿಧಿ, ಚನ್ನನ ಸುಧೆ, ಚನ್ನನ ಸಕಲಾಯು, ಚನ್ನನ ಅಮೃತ ಸಮುದ್ರನಾದ ಶಿವ. ಶಿವನನ್ನು ಸಂಬೋಧಿಸುವಾಗ ಚನ್ನಾದವನು ಎಂಬರ್ಥದ ವಿಶೇಷಣದ ಜತೆ 'ಚನ್ನಯ್ಯ'ನೆಂಬ ಅಭೇದವೂ ಸಾಧಿತವಾಗುವುದರಿಂದ ಶಿವಮಯವಾದಂತೆ ಚೆನ್ನಮಯವಾಗುತ್ತದೆ ಕವಿ ಚೇತನ. ಚನ್ನಯ್ಯನ ಮೂಲಕ ಹರಿಹರ ದಲಿತಮಯವಾಗುತ್ತಾನೆ. ಇದಕ್ಕೆ ನೆರವಾಗುವುದು 'ಶಿವಭಕ್ತಿ'. ಶಿವಭಕ್ತಿ ಜಾತಿ-ವರ್ಗಗಳನ್ನು ನಾಶಮಾಡಿಬಿಡುವ ಸಾಮರ್ಥ್ಯ ಹೊಂದಿದೆ ಎಂಬ ನಂಬಿಕೆಯೇ ಹರಿಹರನಲ್ಲಿ ಕೆಲಸ ಮಾಡಿದೆ. ಈ ನಂಬಿಕೆ ಭ್ರಮಾತ್ಮಕವಾದುದು, ಅವಾಸ್ತವವಾದುದು. ಆದರೆ ಶೋಷಕ ಸಾಮಾಜಿಕ ವ್ಯವಸ್ಥೆಯ ಮೂಲಾಂಶಗಳನ್ನು ನುಚ್ಚುನೂರು ಮಾಡುವ ಪ್ರತಿಭಟನೆಯ ಸಂಕೇತವೂ ಆಗುತ್ತದೆಂಬುದು ಕುತೂಹಲಕಾರಿಯಲ್ಲವೇ? ಈ ಸಂಕೇತವೇ ೧೨ನೇ ಶತಮಾನದ ಶರಣರ ಪ್ರಬಲ ಅಸ್ತ್ರವಾಯಿತು. ಭಕ್ತನೇ ಶಿವನು ಎಂಬ ಅದ್ವೈತದಿಂದಾಗಿ ಚನ್ನಯ್ಯನ ಮೂಲಕ ಮಾದಿಗ ಕುಲವೂ ಶ್ರೇಷ್ಠವಾಗುತ್ತದೆ. ಬ್ರಾಹ್ಮಣ್ಯಕ್ಕಿಂತ ಉತ್ಕೃಷ್ಟವಾಗುತ್ತದೆ. ಪರಂಪರೆ ಮಾದರ ಎಂಬ ವಿಶೇಷಣವಿಲ್ಲದೇ ಚನ್ನಯ್ಯನನ್ನು ಗುರುತಿಸದಿರುವುದನ್ನು ಅಗತ್ಯವಾಗಿ ಗಮನಿಸಬೇಕು.

ಚನ್ನನಂಥ ಲೌಕಿಕವ್ಯಕ್ತಿಯನ್ನು ಶಿವನಂಥ ಅಲೌಕಿಕ ಅತ್ಯಗಾಧ ಶಕ್ತಿಯೆಂದು ಅಭೇದ ಕಲ್ಪಿಸುವುದು ; ಕಾಣಲಾಗದ ದೈವವನ್ನು ಚನ್ನಯ್ಯನಂಥವರ ರೂಪದಲ್ಲಿ ಕಾಣುವುದು ; ಈ ಹಂತದಲ್ಲಿ ಮಾನವರ ನಡುವೆ ಕಲ್ಪಿತವಾಗಿರುವ ವರ್ಣ-ವರ್ಗದ ಗೋಡೆಗಳನ್ನು ಕೆಡವಿ ಹಾಕುವುದು, ಇವೆಲ್ಲ ಹರಿಹರನ ರಗಳೆಯಲ್ಲಿ ಪ್ರಕಟವಾಗಿರುವ 'ದರ್ಶನ'. ರಗಳೆ

ಶಿವನಿಗೆ ಹಾಸುಗೆ ಎನಿಸುವ 'ಚೋಳ' ದೇಶದ ಪರಿಚಯ ಮಾಡುವುದರಿಂದ ಸುರುವಾಗುತ್ತದೆ. ವಾಸ್ತವ ಚಿತ್ರಣದ ಬದಲಿ ಕವಿ ಸಹಜವಾದ ಅತ್ಯುಕ್ತಿ, ರಮ್ಯಕವಾದ ವರ್ಣನಾ ವೈಖರಿ ಇಲ್ಲಿ ಕಾಣುತ್ತದೆ. ಈ ಓಘದಲ್ಲಿ ಅವನು ವಿರೋಧಿಸುವ ವೈದಿಕ ವಾಙ್ಮಯ ಇಲ್ಲಿ 'ವೇದಮಯವಾಯಿತು', ಎಂದು ತಲೆಹಾಕಿಬಿಡುತ್ತದೆ. ಈ ಬಗೆಯ ವೈಚಾರಿಕ ವೈರುಧ್ಯಕ್ಕೆ ಕಾರಣ ಕವಿ ಆರಾಧ್ಯಶೈವಪರಂಪರೆಗೆ ಸೇರಿರುವುದರಿಂದಾಗಿಯೇ. ಹರಿಹರನ ಆರಾಧ್ಯ ಶೈವನಿಷ್ಠೆಗೆ ಪೆಟ್ಟು ಬೀಳುವುದು ಶೈವೈಕನಿಷ್ಠೆಯಿಂದಾಗಿ. (ಆರಾಧ್ಯರಲ್ಲಿ ಹರಿ-ಹರ ಅಭೇದ ಭಕ್ತಿಯಿದೆ. ಶಿವದಾರರಂತೆ ಜನಿವಾರವೂ ಇದೆ.) ಕವಿಯ ಅತಿಶಯೋಕ್ತಿ ನಿರ್ಭಿಡೆಯಿಂದ ನಿರರ್ಗಳವಾಗಿ ಹರಿಯುತ್ತದೆ. ಅವನ ಕಣ್ಣಿಗೆ ಊಳಿಗಮಾನ್ಯ ಕಾಲದ ಶೋಷಣೆಯ ಅನಿಷ್ಟಗಳಾವುವೂ ಕಾಣುವುದಿಲ್ಲ. ಶಿವಭಕ್ತಿಯಿಂದ ತುಂಬಿರುವ ಚೋಳದೇಶದಲ್ಲಿ ಮನೆಗಳೆಲ್ಲ ಶಿವಭವನಗಳು; ವಿವಿಧ ಜನರೆಲ್ಲ ಶಿವಭಕ್ತರು, ಊರುಗಳೆಲ್ಲ ಶಿವಪುರಗಳೇ. ಕಾವೇರಿಯನ್ನು ಸೋಕಿದವರ ಪಾಪಗಳೆಲ್ಲ ನಾಶವಾಗುತ್ತವೆ. ಏಕೆಂದರೆ ಹರಭಕ್ತಿರಸದಂತೆ ಕಾವೇರಿ ಹರಿಯುತ್ತಾಳೆ. ತರು, ಕಲ್ಪತರು, ಗಿರಿ ಹೇಮಗಿರಿ ಇಂಥ ದೇಶವನ್ನು ಆಳುವ ದೊರೆ ಕರಿಕಾಲನೂ ಹರಭಕ್ತ. ಇವನಲ್ಲಿ ಕಂಪಣದ ಹುಲ್ಲ ಕಾಯಕ ಮಾಡುವಾತ ಮಾದರ ಚನ್ನ. ಇಲ್ಲಿ ನಾಲ್ಕು ಪುಟಗಳಷ್ಟು ದೀರ್ಘವಾಗಿ ಚನ್ನಯ್ಯನ ಶಿವಭಕ್ತಿಯ ವಿವರಗಳಿಗೆ ಪ್ರಥಮ ಆದ್ಯತೆ ನೀಡಿದ್ದಾನೆ ಹರಿಹರ. ತದನಂತರವಷ್ಟೇ ಚೋಳನ ಆಡಂಬರದ ಶಿವಭಕ್ತಿಯನ್ನು ವರ್ಣಿಸುತ್ತಾನೆ. ಈ ಎರಡೂ ಕ್ರಮಗಳನ್ನು ತುಲನೆ ಮಾಡಿ ಬಡವ ಅಸ್ಪೃಶ್ಯನ ಭಕ್ತಿಯ ಹಿರಿಮೆಯನ್ನು ಎತ್ತಿ ಹಿಡಿಯುವುದು ಕವಿಯ ತಂತ್ರ.

ಚನ್ನಯ್ಯ ಲಿಂಗಾನುಭಾವಿ, ಲಿಂಗಪ್ರಾಣಿ, ಲಿಂಗಾಭಿಮಾನಿ, ಲಿಂಗೈಕ್ಯ, ಗುಪ್ತ ಮಾಹೇಶ್ವರ. ಯಾರಿಗೂ ಈತನ ಭಕ್ತಿ ಮಹಿಮೆ ತಿಳಿದಿಲ್ಲ. ಆದರೆ ಶಿವನಿಗೆ ತಿಳಿದಿದೆ. ಕವಿ ಈ ಸಂದರ್ಭದಲ್ಲಿ ಹೇಳುವ ಮಾತು ಮಹತ್ವದ್ದು :

" ಒಳಗೆ ಭಕ್ತಿಯ ಗುಂಪು ಹೊರಗೆ ಜಾತಿಯ ಸೊಂಪು
ಒಳಗೆ ಮುಕ್ತಿಯ ನುಂಪು ಹೊರಗೆ ಜನ್ಮದ ಪೆಂಪು "
....
ಪೆರರರಿಯದಂತೊಳಗೆ ಲಿಂಗಾರ್ಚನೆಯೊಳಿರ್ಪ
ಅರಿವಂತೆ ಹೊರಗೆ ಕುಲಧರ್ಮ ಕರ್ಮದೊಳಿರ್ಪ "

ಅಂತರಂಗ ಬಹಿರಂಗದ ಭಿನ್ನಪ್ರಪಂಚಗಳನ್ನು ಬದುಕಿದ್ದವ ಚನ್ನಯ್ಯ. ಶರಣರ ಅಂತರಂಗ ಬಹಿರಂಗದಲ್ಲಿ ಕಾಯಕವೇ ಕೈಲಾಸವಾಗಿತ್ತು. ಇಲ್ಲಿ ಗುಪ್ತರೀತಿಯಲ್ಲ ವ್ಯಕ್ತರೀತಿಯೇ ಕಾಣುತ್ತದೆ. ಚೋಳ ದೇಶದಲ್ಲಿದ್ದ ಮಾದರ ಚನ್ನಯ್ಯನ ಸ್ಥಿತಿ ಇದಕ್ಕೆ ಭಿನ್ನವಾಗಿದೆ. ಪುರದಲ್ಲಿ ಅಂದರೆ ಕೇರಿಯಲ್ಲಿ ಆತನ ಶಿವಾರ್ಚನೆಗೆ ಎಡೆಯಿಲ್ಲ. ಕಾಯಕಕ್ಕೆ ಕಾನನಕ್ಕೆ ಹೋಗಿದ್ದಾಗ ಕಂಡ ಚೆಲುವನ್ನು ಅಕ್ಷಿಮುಖದಿಂದ, ಕೊಂಡ ಸವಿಯನ್ನು ನಾಲಗೆಯಿಂದ

ಹೀಗೆ ಪಂಚೇಂದ್ರಿಯಗಳ ಮೂಲಕ ಪಂಚಾನುಭವಗಳನ್ನು ಲಿಂಗಾರ್ಪಿತ ಮಾಡುತ್ತಿದ್ದ. ಅಸ್ಪೃಶ್ಯನಾಗಿದ್ದ ಚನ್ನಯ್ಯ ಪುರದಲ್ಲಿ ಬಂಧನದಲ್ಲಿದ್ದಂತೆ ಇದ್ದರೆ, ಕಾನನದಲ್ಲಿ ಸರ್ವತಂತ್ರ ಸ್ವತಂತ್ರನಾಗಿ ತನ್ನ ಶಿವಸಾಧನೆಯ ಸುಖದಲ್ಲಿದ್ದಾನೆ. ಸಂಸಾರ ಸನ್ಯಾಸಗಳ ಈ ದ್ವಂದ್ವ ಸ್ಥಿತಿಯನ್ನು ಗಮನಿಸಬೇಕು. 'ಪುರ' ಲೌಕಿಕ ಜೀವನಕ್ಕೆ, ಸಂಸಾರಕ್ಕೆ, ಬಂಧನಕ್ಕೆ ಕಾರಣವಾದರೆ; 'ಕಾನನ' ಸನ್ಯಾಸಕ್ಕೆ ಸ್ವಾತಂತ್ರ್ಯಕ್ಕೆ, ಸಾಧನೆಗೆ, ಅಲೌಕಿಕ ಆನಂದಕ್ಕೆ ಎಡೆಯಾಗುತ್ತದೆ. ಈವರೆಗೂ ಹೇಳುತ್ತ ಬಂದಿರುವ ಭಾರತೀಯ ಲಿಖಿತ ಪರಂಪರೆಯ ಆದರ್ಶದ ಪರಿಕಲ್ಪನೆಯೇ ಇದಲ್ಲವೇ? ವೈದಿಕರಲ್ಲಾದರೆ ಋಷಿಮುನಿಗಳ ಶಾಶ್ವತ ವಾಸಸ್ಥಾನ ಕಾನನ ; ವಾನಪ್ರಸ್ಥ ಮತ್ತು ಸನ್ಯಾಸ ಆಶ್ರಮಗಳಿಗೆ ಆಧಾರ. ಚನ್ನಯ್ಯನ ಜೀವನ ಹಾಗಲ್ಲ. ಇವನಿಗೆ ಕಾನನ ಕಾಯಕದ ನೆಲೆಯಾಗಿರುವಂತೆ ಸಾಧನೆ, ಸಿದ್ಧಿಗಳ ತಾತ್ಕಾಲಿಕ ನಿವಾಸ. ಪುರ-ಕಾನನಗಳ ಇಕ್ಕಟ್ಟಿನಲ್ಲಿ ದಲಿತ ಚನ್ನಯ್ಯ ಪಕ್ವಗೊಳ್ಳುತ್ತಿದ್ದಾನೆ. ಪ್ರತಿಯಾಗಿ ಚೋಳಪುರದಲ್ಲಿ ಶಿವಸಾಧನೆಗೆ ತೊಡಗಿಕೊಂಡಿದ್ದಾನೆ. ಕಾನನದ ಮುಕ್ತ ಪರಿಸರದಲ್ಲಿ ಭಕ್ತಿ ತಲ್ಲೀನನಾದ ಚನ್ನಯ್ಯನ ಚಿತ್ರಣದಲ್ಲಿ ಕವಿ ಸ್ವತಃ ತನ್ನನ್ನೇ ಏಕೀಭವಿಸಿಕೊಳ್ಳುತ್ತಾನೆ. ನೋಡಿ :

> " ಬಾರಯ್ಯ ಬಾರ ಶಿವಭಕ್ತೈಕ ಬಂಧುವೇ
> ಬಾರಯ್ಯ ಬಾರ ಕಾರುಣ್ಯರಸ ಸಿಂಧುವೆ
> ಗುರುವೆ ವರ ಗುರುವೆ ಸದ್ಗುರುವೆ ಗುರುಲಿಂಗವೆ
> ಭರದೊಳರ್ಚಿಪ ಜನದ ಮನದ ಸರ್ವಾಂಗವೇ "

ಕವಿ ಕಾವ್ಯವನ್ನು ಭಕ್ತಿಯ ಭಾವುಕತೆಗೆ, ಲಯಬದ್ಧ ತನ್ಮಯತೆಗೆ ದುಡಿಸಿಕೊಳ್ಳುವ ರೀತಿ ಇದು. ಪರಿಮಳದ ತಿರುಳೆನಿಪ ನಾನಾ ಬಗೆಯ ಹೂಗಳನ್ನು ಆಯ್ದು ಲಿಂಗಪೂಜೆ ಮಾಡಿ ಪುಳಕವೇರುವ, ಹಾಡುವ, ಕುಣಿಯುವ, ಬೆವರುವ, ಬೀಳುವ ಹುಚ್ಚುತನವನ್ನು ಕವಿ ವರ್ಣಿಸುತ್ತಾನೆ.

ಹುಲ್ಲು ಕೊಯ್ದು ಎತ್ತಿನ ಮೇಲೆ ಹೇರಿಕೊಂಡು ಬಂದು ಅರಮನೆಯಲ್ಲಿ ಹಾಕಿ ತನ್ನ ಮನೆಗೆ ಬಂದು ಹೆಂಡತಿ ನೀಡಿದ ಅಂಬಲಿಯನ್ನೇ ಅಮೃತ ಸಮಾನವೆಂದು ಭಾವಿಸಿ ಶಿವನಿಗೆ ಅರ್ಪಿಸಿ ಸೇವಿಸುತ್ತಲಿದ್ದ. ಇದನ್ನು ಯಾರೂ ಅರಿಯದ ಅತಿಭಕ್ತ, ಅತಿಗುಪ್ತ, ಅತಿಮಾನಿ, ಅತಿಮೌನಿ, ಅತಿಆಪ್ತನೆನ್ನುತ್ತಾನೆ ಹರಿಹರ.

ಈ ರೀತಿ ೬೦ ವರ್ಷ ಕಳೆಯುತ್ತದೆ. ಈ ಅತಿಗುಪ್ತ ಭಕ್ತನನ್ನು ಮೆರೆಯಬೇಕೆಂದು ಶಿವ ಯೋಚಿಸುತ್ತಾನೆ. ಹೆಂಡತಿ ನೀಡಿದ ಅಂಬಲಿಯನ್ನು ಚನ್ನಯ್ಯ ಭಕ್ತಿರಸವನ್ನು ಕುಡಿದಂತೆ ಕುಡಿದಾಗ ರುಚಿಯ ಸುಖ ಶಿವಲಿಂಗವನ್ನು ತಾಕಿ ಶಿವ ಚನ್ನಯ್ಯನೊಡನೆ ಉಣ್ಣುತ್ತಾನೆ, ಸುಖಿಸುತ್ತಾನೆ. ಚನ್ನಯ್ಯ ಒಂದು ಸಲ ಸುರಕೊಂಡುದಕ್ಕೆ ಶಿವಪದವೇ ಪ್ರಾಪ್ತವಾಯಿತು. ಇನ್ನೊಮ್ಮೆ ಸುರಕೊಂಡರೆ ಇನ್ನಾವಘನಪದವನ್ನು ನೀಡಬೇಕೆಂದು

ಶಿವನಿಗೆ ಚಿಂತೆ: ಹೆದರಿಕೆ. ಈ ಸಂದರ್ಭದಲ್ಲಿ ಹರಿಹರ ''ಭಾಪು ಭಾಗ್ಯವೇ ಚೆನ್ನನಿಂದಧಿಕರಿನ್ನುಂಟೆ: ಭಾಪು ಪುಣ್ಯವೇ ಶಿವನ ಕಾರುಣ್ಯವಿನಿತುಂಟೇ'' ಎನ್ನುತ್ತಾನೆ. ಹೀಗೆ ಶಿವ ಚನ್ನನ ಜತೆಗಿದ್ದಾಗ ಅತ್ತ ಚೋಳದೊರೆ ಎಂದಿನಂತೆ ಆಡಂಬರದ ಶಿವಪೂಜೆಗೆ ಕೂರುತ್ತಾನೆ . ಈ ಪ್ರಸಂಗವನ್ನು ಸಾಕಷ್ಟು ದೀರ್ಘವಾಗಿ ವರ್ಣಿಸುತ್ತಾನೆ ಕವಿ. ದಲಿತನ ಸಾಮಾನ್ಯಭಕ್ತಿಯ ಜತೆ ರಾಜನ ಆಡಂಬರವನ್ನು ತುಲನೆ ಮಾಡುವುದು ಇಲ್ಲಿಯ ಉದ್ದೇಶ. ಅಂಬಲಿಯ ರುಚಿ ಹತ್ತಿದ ಶಿವ ಇಂದು ಚೋಳನ ಮೃಷ್ಟಾನ್ನ ಊಟ ಮಾಡುವುದಿಲ್ಲ. ಆಗ ಚೋಳ ಕತ್ತಿಯನ್ನು ಕೊರಳಿಗೆ ಹೂಡಿಕೊಳ್ಳುತ್ತಾನೆ. ಈ ಬಗೆಯಲ್ಲಿ ಪ್ರಾಣದ ಹಂಗುದೊರೆದು ವೀರನಿಷ್ಠೆಯನ್ನು ತೋರಿಸುವಂಥ ವೀರಭಕ್ತರಿಂದಲೇ ಹುಟ್ಟಿದ್ದು ವೀರಶೈವ ; ವೀರರ ಶೈವವೇ 'ವೀರಶೈವ' ಎಂಬ ಕಲ್ಪನೆ ಹರಿಹರನ ರಗಳೆಗಳ ಅಭ್ಯಾಸದಿಂದ ಖಚಿತವಾಗುತ್ತದೆ. ಶಿವ ಪ್ರತ್ಯಕ್ಷನಾಗಿ 'ವಿಚಾರವಿಲ್ಲದೆ ಹೀಗೆ ಮಾಡಬೇಕೆ? ನಿನ್ನ ಅರಸುತನವನ್ನು ನಮ್ಮಲ್ಲಿ ತೋರಿಸುತ್ತೀಯಾ, ಚನ್ನಯ್ಯನೊಡನೆ ಉಂಡೆವು ಹಸಿವಿಲ್ಲ, ಚೋಳಾದಿಗಳು ಪಡೆಯದ ಅಂಬಲಿಯ ಸವಿ ಅದೆಷ್ಟೆನ್ನುತ್ತೀ, ಈ ಮೃಷ್ಟಾನ್ನಗಳಾವುವೂ ಅದಕ್ಕೆ ಸಮನಿಲ್ಲ' ಎಂದು ಹೇಳಿ ಲಿಂಗದಲ್ಲಿ ಹೋಗುತ್ತಾನೆ. ಚೋಳ ಕಾಲ್ನಡೆಯಲ್ಲಿ ಚೆನ್ನನನ್ನು ಕಾಣುವ ಆತುರದಲ್ಲಿ ಕೇರಿಗೆ ಬರುತ್ತಾನೆ. 'ಎನ್ನ ಗತಿ ಎನ್ನ ಮತಿ ಚನ್ನನಂ ಕಂಡಿರೇ ' ಮುಂತಾಗಿ ಜನರನ್ನು ಕೇಳುತ್ತ ಬರುತ್ತಾನೆ. ಚಕ್ರವರ್ತಿ ತನ್ನ ಕೆಲಸದ ಆಳನ್ನು ಹುಡುಕಿಕೊಂಡು ಹಲುಬುತ್ತ ಬರುವ ಪ್ರಸಂಗವನ್ನು ಸಾಮಂತಶಾಹಿ ಕಾಲ ಸ್ಥಿತಿಯಲ್ಲಿ ಊಹಿಸುವುದಕ್ಕೂ ಕಷ್ಟವಾಗುತ್ತದೆ. ಆದರೆ ಅದೆಲ್ಲ ಹರಿಹರನಲ್ಲಿ ನಡೆದು ಹೋಗುತ್ತದೆ. ಚೋಳ ಚನ್ನನನ್ನು ಆರ್ತನಾಗಿ ಹುಡುಕುವ ಹೊಗಳುವ ವಿವರಗಳು ವಿಶೇಷವಾಗಿವೆ. ಚನ್ನಯ್ಯನಿರುವ ಗುಡಿ ಎಲ್ಲಿ ? ಎಂದು ಹುಡುಕುತ್ತ ಹಿರಿಯಕೇರಿಗೆ ಬಂದು ಅವನನ್ನು ಕಂಡು 'ಎನ್ನೊಡೆಯನಿದನಿದನೆ ಚೆನ್ನಯ್ಯನೆಂದೆನುತೆ' ಸರ್ವಾಂಗವನ್ನು ಚನ್ನನ ಪದತಲದಲ್ಲಿ ಇಳಿಸುತ್ತಾನೆ. ಚನ್ನಯ್ಯ 'ಎನ್ನ ಕುಲಮಂ ನೋಡದೆ ಇಂತು ಬರ್ಪರೆ ಚೋಳ, ಎನ್ನ ಜಾತಿಯನರಿಯದಿಂತು ಮಾಳ್ಪರೆ ಚೋಳ' ಎಂದು ಗದ್ಗದಿಸಿ 'ಕಾಲ ಬಿಡು ಚೋಳ, ನಿನಗೆ ನಿನ್ನಾಣೆ ಎನ್ನಾಣೆ ಬಿಡು ಬಿಡು ಚೋಳ' ಎನ್ನುತ್ತಾನೆ. ದೊರೆ 'ದೇವನೊಲ್ದನ ಕುಲಂ ಸತ್ಕುಲಂ, ... ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ' 'ನಿನ್ನ ಕೆರಕ್ಕೆ ನನ್ನ ಶಿರ ಸರಿಯೆ ' ಎಂದು ಆನೆಯನ್ನೇರಿಸಿ ಮೆರವಣಿಗೆಯಲ್ಲಿ ಶಿವಾಲಯಕ್ಕೆ ಬರುತ್ತಾನೆ. ಅಲ್ಲಿ ಚನ್ನಯ್ಯ ಶಿವನ ಜತೆ ತಕರಾರು ಮಾಡುತ್ತಾನೆ. 'ಅರಿಯದೇ ಅಂಬಲಿಯನು ಅರ್ಪಿಸಿದೊಡೆ ಇಂತಿರಿವರೇ?' ಎಂದು ಕೇಳಿ, ವಾದಕ್ಕೆ ಹರಲೆ ತಂದಿಕ್ಕಿತು ಈ ಭಕ್ತಿ ಇನ್ನು ಇಲ್ಲಿ ಬಾಳಲಾರೆ ಎಂದು ಅಲಗು ಕಿತ್ತು ಕೊರಳು ಕತ್ತರಿಸಿಕೊಳ್ಳಲನುವಾಗುತ್ತಾನೆ. ಶಿವ ಬಂದು 'ಮರೆದು ಚೋಳಂಗೆ ಪೇಳ್ದೊಡೆ ಕೋಪವೇಕೆ ?' ಎಂದು ತಕ್ಕ ಪ್ರತ್ಯುತ್ತರ ನೀಡಿ ಚನ್ನನನ್ನು ಕೊಂಡಾಡುತ್ತಾನೆ. ಪುಷ್ಪಕದಲ್ಲಿ ಚನ್ನನನ್ನು ಕೈಲಾಸಕ್ಕೆ ಕರೆತಂದು ಗಣಪದವಿ ನೀಡುತ್ತಾನೆ. ಹೀಗೆ 'ಕುಲತಿಲಕನೊಪ್ಪಿದಂ ಕುಲಹೀನನೊಪ್ಪಿದಂ' ಎನ್ನುತ್ತಾನೆ ಹರಿಹರ. ಚೋಳದೊರೆ, ಚನ್ನಯ್ಯರಿಬ್ಬರೂ ವೀರಮಾಹೇಶ್ವರರೇ. ಕೊರಳಿಗೆ ಅಲಗು

ಹೂಡಿಕೊಳ್ಳುವಷ್ಟು ಭಕ್ತಿಯ ಭಾವುಕರೇ. ಆದರೂ ಇವರಲ್ಲಿ ಯಾರು ಮೇಲು ಎಂಬ ಪ್ರಶ್ನೆ ಎದ್ದು ಬಂದಿದೆ. ತಮಿಳುನಾಡಿನ ನಾಯನ್ಮಾರರ ಅಥವಾ ಕನ್ನಡ ನಾಡಿನ ಶಿವಶರಣರ ಭಕ್ತಿಪಂಥದ ಉತ್ತರ ಸ್ಪಷ್ಟವಿದೆ. ಅತ್ಯಂತ ಶೋಷಣೆಗೆ ಒಳಗಾದ ದಲಿತ ಶ್ರಮಜೀವಿಯೇ ಮೇಲು ಎಂದು. ಭಕ್ತಿಪಂಥ ನಮ್ಮ ದೇಶದ ಶತಶತಮಾನದಿಂದ ಉಳಿದು ಬಂದ ವರ್ಗ ಜಾತಿ ಸಮಸ್ಯೆಯನ್ನು ಹೇಗೆ ಗ್ರಹಿಸಿತು ಎಂಬುದಕ್ಕೆ ಈ ರಗಳೆ ಉತ್ತಮ ನಿದರ್ಶನ. ಇಲ್ಲಿ ಕಾಣುವ ಪರಿಹಾರವು ಸರ್ವಸಮರ್ಪಕ, ಪ್ರಶ್ನಾತೀತ ಎಂದಲ್ಲ. ಆದರೆ ಮೇಲ್ವರ್ಗ ಮೇಲ್ಜಾತಿಗಳಿಗೆ ಪ್ರತಿಯಾಗಿ ಕೆಳವರ್ಗ ಕೆಳಜಾತಿಗೆ ಮನ್ನಣೆ ನೀಡಲಾಯಿತು, ಎಂಬ ಇತ್ಯಾತ್ಮಕ ಸಂಗತಿ ಇಲ್ಲಿರುವುದನ್ನು ಗಮನಿಸಿ. ನಮ್ಮೆದುರು ಇಂದಿಗೂ ಕೂಡ ವರ್ಗ ಜಾತಿ ಸಮಸ್ಯೆ ಪರಿಹಾರವಿಲ್ಲದೇ ಕುಳಿತಿರುವಾಗ; ಮಧ್ಯಯುಗದ ಊಳಿಗಮಾನ್ಯ ಕಾಲದ ಮಹಾಕವಿಗೆ ಈ ಸಮಸ್ಯೆ ಕಾಡಿದ ರೀತಿಯನ್ನು ನೋಡುವುದಕ್ಕೆ ನಮಗೆ ಕುತೂಹಲವಿರಬೇಕಾದುದು ಅಗತ್ಯ. ಈ ದೃಷ್ಟಿಯಿಂದ ಮಾದರ ಚೆನ್ನಯ್ಯನ ರಗಳೆ ಅಪರೂಪದ ಕಲಾಕೃತಿ. ಇದು ಹುಟ್ಟುಹಾಕಿರುವ ಸಾಂಸ್ಕೃತಿಕ ಪ್ರಶ್ನೆ ಅದ್ಭುತವಾದುದು. ವೀರಶೈವ ಚಳುವಳಿ ಹುಟ್ಟುಹಾಕಿದ ಮೌಲ್ಯ ಪರಂಪರೆಗೆ ಮಹಾಕವಿ ಹರಿಹರ ಸೇರಿಸುವ ಕಲೆಯ ಶಕ್ತಿ ಸಾಮರ್ಥ್ಯ ಸಾಮಾನ್ಯವಾದುದಲ್ಲ. ಬಸವಣ್ಣನಂಥ ಚಳುವಳಿಯ ಪ್ರಮುಖ ನೇತಾರನಿಗೆ ಪರಮಪೂಜ್ಯನಾಗಿದ್ದ ಚೆನ್ನಯ್ಯ ಹರಿಹರನ ರಗಳೆಯ ಮೂಲಕ ನಿಚ್ಚಳ ರೂಪದಲ್ಲಿ ಪ್ರಕಟನಾಗಿದ್ದಾನೆ. ಅಚ್ಚಳಿಯದ ಪ್ರಭಾವ ಬೀರುವವನಾಗಿದ್ದಾನೆ. ಭಕ್ತಿ ಚಳುವಳಿಯ ಪ್ರಭಾವದಿಂದಾಗಿ ಬಡವ ಶ್ರೀಮಂತರ ಮತ್ತು ಮೇಲ್ಜಾತಿ ಕೆಳಜಾತಿಗಳ ನಡುವಿನ ವೈರುಧ್ಯಾತ್ಮಕ ಸಂಘರ್ಷದಲ್ಲಿ ಗೆಲ್ಲುವುದು ಬಡವರು ಮತ್ತು ಕೆಳಜಾತಿ ಜನಗಳೇ. ಇವರು ಗೆಲ್ಲಲು ಅನುಸರಿಸುವ ದಾರಿ ಚರ್ಚಾರ್ಹವಾಗುವ ವಿಷಯ. ಇದು ಮಾದರಿಯಾಗಬೇಕೆಂದೇನೂ ಇಲ್ಲ. ಮತ್ತು ಇದು ಆಯಾ ಕಾಲದ ಸ್ವಭಾವಕ್ಕೆ ಅನುಗುಣವಾಗಿರಬಲ್ಲ ಸಂಗತಿ. ಈ ದೃಷ್ಟಿಯಿಂದ ಇದರ ಮಿತಿಯನ್ನು ತಿಳಿದಿರಬೇಕು.

ಮಾದರ ಚೆನ್ನಯ್ಯನ ಕಥೆಯಲ್ಲಿ ವರ್ಗ ಸಂಘರ್ಷದ ಪ್ರಶ್ನೆಯಿಲ್ಲ. ಶಿವಭಕ್ತಿ ಪ್ರಪಂಚದಲ್ಲಿ ಬಡವ ಶ್ರೀಮಂತ ಮೇಲ್ಜಾತಿ ಕೆಳಜಾತಿ ಎಂಬ ವ್ಯತ್ಯಾಸಕ್ಕೆ ಆಸ್ಪದವೇ ಇಲ್ಲ. ಈ ಕಥೆಯಲ್ಲಿ ಸಾಮಾಜಿಕವಾಗಿ ಆರ್ಥಿಕವಾಗಿ ತುಳಿತಕ್ಕೆ ಒಳಗಾದ ವ್ಯಕ್ತಿ ಸರ್ವಶ್ರೇಷ್ಠನಾಗುತ್ತಾನೆ. ಇದು ಶಿವಭಕ್ತಿಯ ಕಾರಣದಿಂದಾಗಿದೆ. ವರ್ಗಹೋರಾಟವನ್ನು ಶಿವಭಕ್ತಿ ಹೀಗೆ ಪಲ್ಲಟಗೊಳಿಸುತ್ತದೆ. ಇಲ್ಲಿ ವರ್ಗಸಂಘರ್ಷಕ್ಕೆಡೆಯೇ ಇಲ್ಲ. ಶೋಷಿತರು ಶಿವಭಕ್ತಿಮಾರ್ಗದ ಮೂಲಕ ಉತ್ಕೃಷ್ಟ ಪದವಿಯನ್ನು ಪಡೆಯಬಹುದು ಎಂಬ ನಂಬಿಕೆ ಹುಟ್ಟಿಸುವ ಮೂಲಕ ದಲಿತರ ವಿಮೋಚನೆ ಸಾಧ್ಯವಿಲ್ಲ. ಈ ಬಗೆಯಾಗಿಯೂ ಕೂಡ ಈ ರಗಳೆಯನ್ನು ವಿಶ್ಲೇಷಿಸುವ ಸಾಧ್ಯತೆ ಇದೆ. ಇದನ್ನು ಇತ್ಯಾತ್ಮಕ ಮತ್ತು ನೇತ್ಯಾತ್ಮಕವೆಂಬ ದ್ವಿಮುಖ ಸ್ವಭಾವವೆಂದೇ ಹೇಳಬಹುದು.

ಭಕ್ತಿಪಂಥಕ್ಕೆ ವೈವಿಧ್ಯಮಯ ಆಯಾಮವಿದೆ. ಇದಕ್ಕೆ ತಾತ್ವಿಕತೆಯು ಗೋಜಿಲ್ಲ

ಒಮ್ಮೊಮ್ಮೆ. ಕುಂಬಾರ ಗುಂಡಯ್ಯ ಮಡಕೆ ಮಾಡುತ್ತ ಕೈಲಾಸವನ್ನು ಧರೆಗಿಳಿದು ತಂದಿರುವುದನ್ನು ಗಮನಿಸಿ. ಇಲ್ಲಿ ಯಾವ ತತ್ವದ ಜಂಜಡವಿಲ್ಲ. ಲೌಕಿಕವೇ ಅಲೌಕಿಕವಾಗುವ ಕ್ರಮ ಇದು. ಇಂದಿನ ವೈಜ್ಞಾನಿಕ ಯುಗಕ್ಕೆ ಅಲೌಕಿಕ ಎಂಬುದು ಭ್ರಮೆ. ಆದರೆ ಅಲೌಕಿಕವನ್ನು ನಂಬಿ ಲೌಕಿಕವನ್ನು ಸಹ್ಯವಾಗಿಸಿಕೊಂಡು ಗೆದ್ದು ಹೋದವರು ಶರಣರು. ಮನಸ್ಸಿಗೆ ಹಿಡಿಸುವ ಲೌಕಿಕದ ಕಾರ್ಯವೊಂದರಲ್ಲಿ ತನ್ಮಯತೆ ನಿಷ್ಠೆ ಶಿವಪರ ನಿಲುವು ಇದ್ದರೆ ಅದೇ ಮೋಕ್ಷ ಎಂಬುದು ಭಕ್ತಿಮಾರ್ಗ. ಇದರ ತತ್ವಜ್ಞಾನಿಗಳಿಗೆ ದಿಗ್ಭ್ರಮೆ ಹಿಡಿಸುವ ನೀತಿ. ಏಕೆಂದರೆ ಭಕ್ತನಿಗೆ ಅತಿಯಾಗಿ ಹಿಡಿಸುವ ಖಾಸಗಿ ಕಾಮವೂ (ನಂಬಿಯಣ್ಣ, ಮಲುಹಣ) ಭಕ್ತಿಮಾರ್ಗವಾಗಿ ಬಿಡಬಹುದು. ಪರದ ಸಾಧನೆಗೆ ಯಾವ ಲೌಕಿಕ ವಿರೋಧ ಅಥವಾ ಅಡ್ಡಿ ಎಂದು ಭಾವಿಸಲಾಗಿತ್ತೋ ಆ ಕಾಮವೇ ಮೋಕ್ಷಕ್ಕೆ ಮಾರ್ಗವೆಂದು ಹೇಳುವುದು ಸೋಜಿಗವಲ್ಲವೇ ? ಇಂಥ ಸೋಜಿಗಗಳೇ ಭಕ್ತಿಪಂಥದ ಸಾಮರ್ಥ್ಯ. ಪರದ ಮೇಲಿನ ಗಾಢವಾದ ನಂಬಿಕೆ ಇಹದ ಯಾವ ಕಷ್ಟವನ್ನೂ ಎದುರಿಸಲು ಪ್ರೇರಿಸುತ್ತದೆ. ಇಹದ ಕಷ್ಟಗಳು ಪರದ ಪರೀಕ್ಷೆಯೆಂದು ಭಾವಿಸಲಾಗುತ್ತದೆ. ಶೋಷಣೆಯ ವಿರುದ್ಧ ಆಕಸ್ಮಾತ್ತಾಗಿ ಹೋರಾಟ ನಡೆದರೆ ಅದೂ ಕೂಡ ಈ ನೆಲೆಯ ಸಮರ್ಥನೆಯಲ್ಲಿಯೇ.

ವರ್ಣ ನೆಲೆ : ಶ್ವಪಚಯ್ಯ :

ವೈದಿಕ ಸಂಸ್ಕೃತಿಯ ವಿರುದ್ಧ ಹೋರಾಡಿದ ದಲಿತ ಶೈವಭಕ್ತರ ಉತ್ತಮ ನಿದರ್ಶನ ಸಾಮವೇದಿ ರಗಳೆಯಲ್ಲಿದೆ. ಸಾಮವೇದಿ ಎಂಬ ಬ್ರಾಹ್ಮಣನ ಪ್ರಕಾಂಡ ಪಾಂಡಿತ್ಯವನ್ನು ಪೂರ್ವಗ್ರಹವಿಲ್ಲದಂತೆ ಹೊಗಳುತ್ತಾನೆ ಹರಿಹರ. ಜೈನರನ್ನು ಕಂಡರಾಗದ ಹರಿಹರನಿಗೆ ಬ್ರಾಹ್ಮಣರೆಂದರೂ ಅಷ್ಟಕಷ್ಟೇ. ಆದರೆ ಈ ರಗಳೆಯಲ್ಲಿ ಸಾಮವೇದಿಯನ್ನು ಹೊಗಳುವುದರಲ್ಲಿ ಒಂದು ವಿಶೇಷ ಅರ್ಥವಿದೆ. ವೈದಿಕಶಾಹಿಯ ಮಡಿವಂತಿಕೆಗೆ, ಬೌದ್ಧಿಕ ಸಾಮರ್ಥ್ಯಕ್ಕೆ ಸವಾಲನ್ನು ಒಡ್ಡುವುದು ಒಬ್ಬ ದಲಿತ. ಆತ ಬ್ರಾಹ್ಮಣನನ್ನು ಮೈಲಿಗೆಯಿಂದ ಎದುರಿಸುತ್ತಾನೆ. ವಿಶೇಷವೆಂದರೆ ಇಲ್ಲಿ ಮೈಲಿಗೆ ಗೆಲ್ಲುತ್ತದೆ: ಮಡಿ ಸೋಲುತ್ತದೆ (ಭಾರತೀಯ ಸಂಸ್ಕೃತಿಯಲ್ಲಿ ಮಡಿ ಮೈಲಿಗೆಯ ಬಗೆಗಿನ ಸಮಾಜಶಾಸ್ತ್ರೀಯ ಚರ್ಚೆಗಳು ಸಾಕಷ್ಟು).

ಉತ್ತರದಿಕ್ಕಿನ ಛತ್ತೀಸಪುರದಲ್ಲಿ 'ಸಾಮವೇದಿ' ಎಂಬ ಸಾಮವೇದ ಪಾರಂಗತನಿದ್ದ. ಶಾಸ್ತ್ರಗಳು ಅವನ ನಾಲಗೆಯಲ್ಲಿದ್ದವು. ಕಾವ್ಯ ನಾಟಕಗಳು ಮುಖಗತವಾಗಿದ್ದವು. ವೇದಾಂತ ಸಿದ್ಧಾಂತ ತರ್ಕ ತಂತ್ರ ವ್ಯಾಕರಣಗಳನ್ನು ಬಲ್ಲ ಈತ ವಾಗ್ಮಿ. ಅರಸುಗಳು ನಮಸ್ಕರಿಸಿ 'ಪಾವುಡ' ವನ್ನು ಅಟ್ಟುತ್ತಿದ್ದರು. ಅರಸರು ಈತನಿಗೆ ೩೬ ಗ್ರಾಮಗಳನ್ನು ಉಂಬಳಿ ಕೊಟ್ಟಿದ್ದರು. ವಿಪ್ರರೆಲ್ಲ ನಮಿಸುತ್ತಿದ್ದರು. ಈತನ ಆಚರಣೆ ವೇದಮಯ, ನುಡಿ ಶಾಸ್ತ್ರಮಯ, ಯಾರಿಗೂ ಎರಗದವ. ಇವನಿಗೆ ೩೬೦೦೦ ಜನ ಶಿಷ್ಯರು. ಒಂದು ದಿನ ಶಿಷ್ಯರ ಜತೆ ಆರಣವ ನೋಡಲು ಅರಣ್ಯಕ್ಕೆ ಬಂದ. ಶಿಷ್ಯರಿಗೆ ವೇದಪಾಠ ಹೇಳಿದ. ಮಧ್ಯಾಹ್ನದ ನಂತರ ಆಕಾಶಮಾರ್ಗದಲ್ಲಿ ನಡೆದು ಬಂದ.

ಇತ್ತ ಅದೇ ಛತ್ತೀಸಪುರದ ಉತ್ತಮ ಶಿವಾರ್ಚಕನಾದ ಶ್ವಪಚದೇವರು ಭವಿಗಳಾರೂ ಕಾಣದ ಅಡವಿಯಲ್ಲಿ ಶಿವನನ್ನು ಪೂಜಿಸಲು ಕಾಡ ಹೂ ಆಯ್ದು ಭಯಭಕ್ತಿಯಿಂದ ಉಟ್ಟ ಕೊಟ್ಟು ಪೂಜೆ ಮಾಡುತ್ತಿದ್ದರು. ಕೈಗೆ ಬಂದಂತ ಶಿವಪೂಜೆ ಮಾಡಿ ಸಾಲಗಗೆ ಬಂದಂತೆ ಹಾಡುತ್ತ ಊಟಕ್ಕೆ ಜಾತಿಧರ್ಮದ ಓಗರ ಮಾಡತೊಡಗಿದರು. ಕಪಾಲದಲ್ಲಿ ಸತ್ತನಾಯಿಯ ಮಾಂಸ ಇಟ್ಟು ಭಸ್ಮದಿಂದ ಶುದ್ಧ ಮಾಡಿದರು. ಸಾಮವೇದಿ ಆಕಾಶ ಗಾಮಿಯಾಗಿ ಬರುವುದ ಕಂಡು ಕೆರದಿಂದ ಮುಚ್ಚಿದರು. ಇದನ್ನು ಸಾಮವೇದಿ ನೋಡಿ ಬೆರಗಾದ. ಕಂಡರಿಯೆ. ಕೇಳರಿಯೆ ಎಂದುಕೊಳ್ಳುತ್ತ ಕೇಳಬೇಕೆಂದು ಸಮೀಪ ಬಂದ. ಶಿಷ್ಯರನ್ನೆಲ್ಲ ಪುರಕ್ಕೆ ಕಳಿಸಿದ. ಕೇಳಿದರೆ ಮಾತೇ ಇಲ್ಲ. ಮರುದಿನವೂ ಹಾಗೇ. ಮೂರನೇ ದಿನ ಶಂಕರ ಸ್ವಪ್ನದಲ್ಲಿ ಬಂದ. 'ಕುಲದ ಗರ್ವದಲ್ಲಿ ಕೆಟ್ಟು ಹಾಳಾದೆ ನಾನು, ಶ್ವಪಚದೇವರು ಬೇರಲ್ಲ. ನೀನು ಅವರಿಗೆ ಆಳಾದರೂ ತೀರದು'; ಎಂದ. ಶ್ವಪಚಯ್ಯನ ಕನಸಿನಲ್ಲಿ ಬಂದು. 'ನಿನ್ನ ದರ್ಶನದಿಂದ ಅವನ ಭವಿತನ ಹೋಯ್ತು, ಕುಲವೆಲ್ಲ ಹಸನಾಯ್ತು ಕರುಣೆಯಿಂದ ಉಪದೇಶ ಮಾಡು ' ಎಂದು ಆಜ್ಞಾಪಿಸಿದ. ತಾನು ಸೋತರೆ ಅವರೇ ಗುರು ಎಂದು ಅಂದುಕೊಂಡು ಸಾಮವೇದಿ ಕಾಡಿಗೆ ಬಂದ. ಮರ್ಕಟ ಚರಿತ್ರ ಬಿಡುವೆ. ಕುತರ್ಕ ಬಿಡುವೆ ಎಂದುಕೊಂಡ. 'ಏಕೆ ನುಡಿಯಿರಿ ದೇವ ?'. 'ವಿಭೂತಿ ಇಟ್ಟುಕೋ ನುಡಿವೆ'. ಎಂದ ಶ್ವಪಚಯ್ಯ. ಸಾಮವೇದಿ ವಿಭೂತಿ ಇಟ್ಟುಕೊಂಡ. ಇಬ್ಬರ ನಡುವೆ ಹುಲ್ಲುಕಡ್ಡಿ ಇಟ್ಟು ಹೇಳಿದರು ಶ್ವಪಚಯ್ಯ 'ಲಿಂಗಾರ್ಚನೆಯಲ್ಲಿದ್ದಾಗ ಭವಿಗಳೊಡನೆ ಮಾತನಾಡೆನು.' 'ಗಿಡ ಮರ ಮೃಗ ಬೇಡರು ಚಾಂಡಾಲರು ಇವೆಲ್ಲ ಭಕ್ತರೇ ?' ಕೇಳಿದ ವಿಪ್ರ. ಶ್ವಪಚಯ್ಯ ನಗುತ್ತ 'ಗಿಡ ಮರದ ಹೂ ಪತ್ರ ಶಿವನಿಗೆ ಎರಗುವವು. ನಡೆವೆಣನಾದ ನಿನ್ನ ದೇಹ ಹಡಿಕೆ ನಾರುವುದು. ಮರಕ್ಕೆ ಕಾಮ ಕ್ರೋಧಗಳುಂಟೇ ? ನಿನಗೆ ಅವು ಇವೆ. ಮೃಗಗಳು ಯಾರನ್ನೂ ಬಾಧಿಸವು. ನಿನ್ನ ಅನ್ನ ಪಾರ್ವಣದ ಪಿಂಡ ಭೋಜನ. ಸತ್ತವರ ಮನೆಯ ಕುಭೋಜನ, ಕಾಕಭೋಜನ. ಬೇಡರವ ಒಂದೂ ವೇದಶಾಸ್ತ್ರ ತಿಳಿದಿಲ್ಲ ನಿಜ. ಅವರ ಜಾತಿ ಧರ್ಮ ಬೇಟೆ. ಜಾತಿ ಚಾಂಡಾಲರು ಅವರು, ಕರ್ಮ ಚಾಂಡಾಲ ನೀನು. ದುರ್ಮುಖಿ ದುರಾಚಾರಿ. ಏಕೋದೇವ ರುದ್ರ ಎಂದು ತಿಳಿದು ವೇದಕ್ಕೆ ತಾಯಾದ ಪಂಚಾಕ್ಷರಿಯನ್ನು ತಿಳಿದೂ ತಿಳಿಯದಂತಿರುವೆ. ಅರಿದರಿದು ಕುರಿಯಾದ ನಿನ್ನಂಥ ಹುಚ್ಚ ಯಾರು? ಗಗನದಲ್ಲಿ ಬರುವೆನೆಂಬ ಗರ್ವ ನಿನಗೆ. ಹಕ್ಕಿ ಹಣ್ಣೆಲೆ ಅಲ್ಲಿ ಹಾರವೇ? ಪಂಚಾಕ್ಷರಿ, ಭಸ್ಮ, ರುದ್ರಾಕ್ಷಿಗಳನ್ನು ತಿಳಿಯದ ಪಾತಕ ನೀನು. ಕತ್ತೆ ಕರ್ಪೂರ ಹೇರ ಹೊತ್ತಂತೆ ವೇದಗಳನ್ನು ತಿಳಿದಿರುವೆ. ಬೇಡರು, ಚಾಂಡಾಲರಿಗಿಂತ ನೀನೇ ದುಷ್ಟ. ಮಹಾಪಾತಕ. ಭವಿ. ಭವಿ'. ಇದರಿಂದ ಸಾಮವೇದಿಯ ಮರಹು ಅಳಿದು ತಿಳಿವು ಮೂಡಿ ಶ್ವಪಚಯ್ಯನಿಗೆ ನಮಸ್ಕರಿಸಿದ. ಶ್ವಪಚಯ್ಯ ಅವನ ಹಣೆಗೆ ಭಸ್ಮ ಹಚ್ಚಿ ಮಸ್ತಕದಲ್ಲಿ ಹಸ್ತವಿಟ್ಟು ಪಂಚಾಕ್ಷರಿ ಮಂತ್ರ ಹೇಳಿ ದೀಕ್ಷೆ ನೀಡಿದ. ಇಬ್ಬರು ಗುರು ಶಿಷ್ಯರಾದರು. ಸಾಮವೇದಿ ಊರಿಗೆ ಬಂದು ಶಿಷ್ಯರಿಗೆ ಶೈವಾಗಮಗಳನ್ನು ಹೇಳತೊಡಗಿದ : ಅವರನ್ನು ಶಿವಭಕ್ತರನ್ನಾಗಿ ಮಾಡಿದ. ಛತ್ತೀಸಪುರ ಶಿವಪುರವಾಯಿತು. ಮನೆ ಮನೆಯಲ್ಲಿ

ಲಿಂಗಾರ್ಚನೆ ಸುರುವಾಯಿತು. 'ಗುರುಮುಟ್ಟಿದ್ದು ಫಲವಾಯಿತು' ಎಂದು ಭಕ್ತಿಯಿಂದ ಸಾಮವೇದಿ ಶಿವಪೂಜೆ ಮಾಡುತ್ತಿದ್ದ. ಗುರುವಿಂದೆ ಬರ್ದುಕಿದೆಂ ಬರ್ದುಕಿದೆಂ ಕುಬುಬುಬು 'ಗುರುವಿಂದೆ ಶುದ್ಧಾಂತ್ಮನಾದೆನೆಲೆ ಕುಬುಬುಬು ' ಎಂದು ಹಿಗ್ಗಿದ. ಒಂದೆರಡು ಮಾಸ ಕಳೆದವು. ತಂದೆಯ ಶ್ರಾದ್ಧದ ದಿನ ಬಂತು. ಅರಣ್ಯಕ್ಕೆ ಶ್ವಪಚದೇವರ ಹತ್ತಿರ ಬಂದ. ನರಕದಲ್ಲಿ ಬೀಳುವವನನ್ನು ಎತ್ತಿದ ಮಹಾತ್ಮ ಆತನಲ್ಲವೇ ? ಪೂಜಿಸುತ್ತ ಪೂಜಿಸುತ್ತ ಶಿವನಾದವ ಶ್ವಪಚ ದೇವರು. 'ನಾಳೆ ತಂದೆಯ ದಿನ, ನೀವೇ ವಿಶ್ವೇದೇವರಾಗಿ ಬನ್ನಿ, ಯಾರೂ ಒಪ್ಪುತ್ತಿಲ್ಲ '. ಎಂದ. 'ಮರುಳೆ ವಿಪ್ರನಾಗಲಾರೆ, ಪಿತೃದಿವಸಕ್ಕೆ ಬರಲಾರೆ, ಶಿವನೇ ಬರುತ್ತಾನೆ ಹೋಗು '. ' ಬರುವುದಕ್ಕೆ ಗುರುತು? ' ' ನನ್ನ ವೇಷದಿಂದಲೇ ಬರುವನು : ಒಂದು ಕರುವನ್ನು ಹೊತ್ತು ಬರುವನು'. ಮರುದಿನ ಸಾಮವೇದಿ ಮನೆಯನ್ನು ಅಲಂಕಾರಗೊಳಿಸಿದ. ಶಿಷ್ಯರೆಲ್ಲ ಸೇರಿದರು. ಹರಭಕ್ತರು ಕೂಡ ನೆರೆದರು. ಪಿರಿಯ ವೇಷದಿಂದ ಶಿವಬಂದ. ಕರು ಹೊತ್ತಿದ್ದಾನೆ, ಸಂಬಳಿಗೋಲಿದೆ. ಕುಣಿದಾಡಿ ಹಾಡಿ ಭಕ್ತಿಯಿಂದೆರಗಿದ ಸಾಮವೇದಿ. ವಿಪ್ರರೆಲ್ಲ ಅಂಜಿ ಹೇಸಿ ಓಡಿದರು. ಸಾಮವೇದಿ ಆತನ ಪಾದ ತೊಳೆದ. ಶಿವ ಪ್ರತ್ಯಕ್ಷನಾದ. ಸಂಬಳಿಗೋಲು ಖಟ್ವಾಂಗವಾಯಿತು, ಸತ್ತ ಕರು ವಿಶ್ವಕ್ಸೇನವಾಯಿತು. 'ವಿಮಾನ ಏರಿಸಿ ಕೈಲಾಸಕ್ಕೆ ನಡೆ' ಎಂದ. 'ಗುರು ಸಹಿತ ಬರುತ್ತೇನೆ' ಎಂದ ಸಾಮವೇದಿ. ಅಷ್ಟೇ ಅಲ್ಲ ಪುರ ಸಹಿತ ಬರುವೆನೆಂದು ಹೇಳಿದ. ಎಲ್ಲರನ್ನೂ ಕೂಡಿಕೊಂಡು ಶಿವ ಕೈಲಾಸಕ್ಕೆ ಬಂದ. ಗುರು ಶಿಷ್ಯರಿಗೆ ಗಣಪದವಿಯನ್ನು ಕೊಟ್ಟ. ಛತ್ತೀಸಪುರವನ್ನು ರುದ್ರಲೋಕದಲ್ಲಿಟ್ಟ.

ಮಾದರಚನ್ನಯ್ಯನ ರಗಳೆಯಲ್ಲಿ ದಲಿತ v/s ಅರಸ ಎಂಬ ವರ್ಗನೆಲೆಯಿದ್ದರೆ, ಇಲ್ಲಿ ದಲಿತ v/s ಬ್ರಾಹ್ಮಣ ಎಂಬ ವರ್ಣನೆಲೆ ಇದೆ. ಈ ದೃಷ್ಟಿಯಿಂದ ತುಂಬ ಮಹತ್ವದ ರಗಳೆ ಇದು. ಭಾರತ ದೇಶದ ಯಜಮಾನ ಸಂಸ್ಕೃತಿಯಾದ ವೈದಿಕಕ್ಕೆ ತದ್ವಿರುದ್ಧವಾಗಿ ಶಿವಭಕ್ತಿಯನ್ನು ಪ್ರತಿಷ್ಠಾಪಿಸುವುದು ಇಲ್ಲಿಯ ವಿಶೇಷ. ಮೇಲ್ಪಂಕ್ತಿಯ ಬ್ರಾಹ್ಮಣ ಶ್ರೇಷ್ಠನನ್ನು ಒಂದು ಪಾತ್ರವನ್ನಾಗಿ ಮಾಡಿ, ಸಾಮಾಜಿಕ ಶ್ರೇಣೀಕರಣದ ಕೆಳತುದಿಯ ಶ್ವಪಚದೇವರನ್ನು ಇನ್ನೊಂದು ಪಾತ್ರ ಮಾಡಿ ಮುಖಾಮುಖಿಯಾಗಿಸಿ ಮಡಿ-ಮೈಲಿಗೆ, ಪವಿತ್ರ-ಅಪವಿತ್ರ, ಶುದ್ಧ-ಅಶುದ್ಧತೆಯ ಚರ್ಚೆಗೆ ಎಳೆಯುವವನು, ಹರಿಹರ. ಸಂಪ್ರದಾಯಿಕವಾದ ಶುದ್ಧ ಮಡಿ, ಪವಿತ್ರವೆಂದು ಭಾವಿಸಲಾದ ಆಹಾರಾದಿಗಳನ್ನು ತಿರಸ್ಕರಿಸಿ, ಹೊಲಸು ಮೈಲಿಗೆಯನ್ನು ಎತ್ತಿ ಹಿಡಿಯುವವನು. ಶಿವಭಕ್ತಿಯ ಎದುರು ಅನೀತಿಯೇ ನೀತಿ; ಮೈಲಿಗೆಯೇ ಮಡಿ; ಅಪವಿತ್ರವೇ ಪವಿತ್ರ. ವರ್ಣ ವರ್ಗ ಧೋರಣೆಯನ್ನು ಬುಡಮೇಲು ಮಾಡುವ ಈ ಕ್ರಾಂತಿಕಾರಕ ಸಿದ್ಧಾಂತವನ್ನು ಹರಿಹರ ಬದ್ಧತೆಯಿಂದ, ನಿಷ್ಠೆಯಿಂದ, ಅರ್ಥಪೂರ್ಣವಾಗಿ ಪ್ರತಿಪಾದಿಸುತ್ತಾನೆ. ಶ್ರೇಷ್ಠತ್ವದ ದುರಹಂಕಾರವನ್ನು, ಪ್ರತಿಷ್ಠಿತ ಸಾಂಸ್ಕೃತಿಕ ಪರಂಪರೆಯನ್ನು ಶಿವಭಕ್ತ ದಲಿತನ ಮೂಲಕ ಚೂರು ಚೂರು ಮಾಡುತ್ತಾನೆ.

ಈ ರಗಳೆಯಲ್ಲೂ ಕಾಡು ನಾಡುಗಳ ದ್ವಂದ್ವವಿದೆ. ಸಾಮವೇದಿಯಲ್ಲಿ ಉಂಟಾಗುವ ಮಹತ್ವದ ಪರಿವರ್ತನೆ ಕಾಡಿನಲ್ಲಾಗಿದೆ. ಕಾಡಿನ ಈ ದರ್ಶನವನ್ನು ಹೊತ್ತು ಆತ ನಾಡಿಗೆ ಬಂದಾಗ ಅಲ್ಲೋಲ ಕಲ್ಲೋಲವಾಗುತ್ತದೆ. ಸಾಮವೇದಿಯೂ ತನ್ನ ಬ್ರಾಹ್ಮಣ ಪರಂಪರೆಯ ಬೋಧನೆಗೂ ಕಾಡಿಗೇ ಬಂದವ. ಆದರೆ ಕಾಡಿನಲ್ಲಿದ್ದ ಶಿವಭಕ್ತಿ ಅವನನ್ನು ಸಂಪೂರ್ಣವಾಗಿ ಪರಿವರ್ತಿಸುತ್ತದೆ. ಶ್ರಾದ್ಧದ ದಿನದಂದು ಸಾಮವೇದಿಯ ಅಗ್ನಿಪರೀಕ್ಷೆ. ಬಹುಶಃ ಅಂದು ನಡೆದ ಗಲಭೆಯಲ್ಲಿ ಊರಿಗೆ ಊರೇ ನಾಶವಾಗುತ್ತದೆ. ಈ ಹೋರಾಟದಲ್ಲಿ ಶ್ವಪಚಯ್ಯ ಸಾಮವೇದಿ ಮತ್ತು ಶಿವಭಕ್ತರು ಸತ್ತು ಹೋಗುತ್ತಾರೆ. ಶ್ರಾದ್ಧಕ್ಕಾಗಿ ಗುರುವನ್ನು ಭೆಟ್ಟಿಯಾಗಲು ಸಾಮವೇದಿ ಬರುವುದು ಕಾಡಿಗೇ. ಶ್ವಪಚದೇವರು ತನ್ನ ಪೂಜೆಗೆ ಆಯ್ದುಕೊಂಡ ಸ್ಥಳ ಕಾಡು. ಸಾಮವೇದಿ ಪ್ರಕಾಂಡ ಪಂಡಿತ. ಆದರೆ ಈ ಶಿಷ್ಟ ಪಾಂಡಿತ್ಯವೆಲ್ಲ ಪಾಮರ ದಲಿತನಿಂದ ಭಂಗಿತವಾಗುತ್ತದೆ. ಅನಕ್ಷರನಿಂದ ಅಕ್ಷರ ಸೋಲುತ್ತಾನೆ. ಶಿವಭಕ್ತಿ ಜ್ಞಾನದಿಂದ ವೈದಿಕ ಜ್ಞಾನ ಭಂಗವಾಗುತ್ತದೆ. ವ್ಯವಸ್ಥೆಗೆ ಸವಾಲೊಡ್ಡುವ ಈ ಕ್ರಮ ಸಾಮೂಹಿಕ ಸಾಧನೆಯಲ್ಲ. ಈ ಬಗೆಯ ಜ್ಞಾನವನ್ನು ಪಡೆದು ಈ ದಾರಿಯಲ್ಲಿ ನಡೆದು ವ್ಯವಸ್ಥೆಗೆ ಸಿಡಿದು ನಿಂತವರ ಗುಂಪೇ ಇತ್ತು ಎಂಬುದು ಹರಿಹರನ ರಗಳೆಗಳಿಂದ ಕಂಡುಬರುವ ಅಂಶ. ಆದರೆ 'ಗುಂಪು' ಕೂಡಿ ಮಾಡಿದ ಹೋರಾಟದ ಕಥೆಗಳು ಕಡಿಮೆ. ಏನಿದ್ದರೂ ವ್ಯಕ್ತಿಯ ಶೌರ್ಯವೇ ಮುಖ್ಯ. ಯಾವ ಕೆಲಸವಾದರೂ ಸರಿಯೆ ಅದು ಶಿವಭಕ್ತಿಯುಕ್ತವಾಗಿದ್ದರೆ ಮುಗಿಯಿತು, ಯಾವ ಜಾತಿ ಕುಲವಾದರೂ ಸರಿಯೆ ಶಿವಭಕ್ತನಾಗಿದ್ದರೆ ಸಾಕು– ಈ ನೆಲೆ ಪ್ರಜಾಸತ್ತೀಯವಾಗುತ್ತದೆ, ಸಮಾನತೆಯ, ಸೋದರತ್ವದ ನೆಲೆಯಾಗುತ್ತದೆ.

ನಾಸ್ತಿಕರಾದ ನಾವು 'ಶಿವಭಕ್ತಿ' ಎಂಬುದಕ್ಕೆ ಯಾವ ಅರ್ಥ ಹೇಳುವುದು ? ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ ಎನ್ನುವುದೇ ? 'ಶೈವಾಗಮಗಳಲ್ಲಿ ಈ ಸಿದ್ಧಾಂತವಿದೆ. ವರ್ಗ-ವರ್ಣ ಜಾತಿ ಭೇದವನ್ನು ತಿರಸ್ಕರಿಸುವ ಅವೈದಿಕ ಶ್ರದ್ಧೆಗಳಲ್ಲಿ ಇದು ಸೇರಿದೆ. ಇಲ್ಲಿ ಆಸ್ತಿಕ ನಾಸ್ತಿಕ ಪಂಥಗಳೆರಡೂ ಇವೆ. ದೇವರನ್ನೊಪ್ಪದ ಆದರೆ ಆತ್ಮವನ್ನೊಪ್ಪುವ ನಾಸ್ತಿಕತೆಯೂ ಇದೆ. ಆತ್ಮ ಪರಮಾತ್ಮಗಳನ್ನು ಒಪ್ಪದ ನಾಸ್ತಿಕತೆಯೂ ಇದೆ. 'ಶೈವ ' ಇವೆರಡನ್ನೂ ಒಪ್ಪದ ಆಸ್ತಿಕ ಅವೈದಿಕ ಪಂಥ. ನಾಸ್ತಿಕ ಅವೈದಿಕವಾದ ಜೈನವನ್ನು ಒಂದೆಡೆ ವಿರೋಧಿಸಿದ ಇದು ಆಸ್ತಿಕ ವೈದಿಕವನ್ನೂ ವಿರೋಧಿಸಿತು. ದ್ರಾವಿಡ ಮೂಲದ ಶೈವ ' ಭಕ್ತಿ' ಎಂಬ ನೆಲೆಯನ್ನು ಆಶ್ರಯಿಸಿತು. ಇಲ್ಲಿ ಹಾಡು ಇದೆ, ಕೇಳಿಕೆಯಿದೆ, ಗಣಪರ್ವಗಳಿವೆ, ನರ್ತನವಿದೆ, ತನ್ಮಯತೆಯಿದೆ, ಭಾವುಕತೆ ಇದೆ, ವೀರತ್ವ ಇದೆ, ತ್ಯಾಗ ಬಲಿದಾನಗಳಿವೆ. ಬಾಳಿನ ಸಾರ್ಥಕತೆ ಇದರಲ್ಲೇ ಇದೆ ಎಂಬ ನಂಬುಗೆ ಇದೆ.

ತಿರುನಾಳ್ಪೋವ :

ಚೋಳದೇಶ. ಆದನೂರು ಎಂಬ ಪುರ. ತಿರುನಾಳ್ಪೋವ ಹಿರಿಯ ಮಾಹೇಶ್ವರ ; 'ಕುಲದೊಳ್ಕಿರಿಯಂ ಮನದೊಳ್ಪಿರಿಯಂ; ನೆಲದೊಳ್ಕಿರಿಯಂ, ಪರದೊಳ್ಪಿರಿಯಂ',

ಪೊನ್ನಾಂಬಲಕ್ಕೆ ನಾಳೆ ಹೋಗಬೇಕು ಎಂದುಕೊಳ್ಳುತ್ತಿದ್ದ. ಬೆಳಗಾದರೆ ಸಾವಿರಾರು ಕೆಲಸ. ಬೆಳಿಗ್ಗೆ ಎದ್ದ ಕೂಡಲೇ ಹಾರುವ ಹಾಜರು ; ಅವನಿಗೆ ಕೆಲಸ ಆಜ್ಞಾಪಿಸಲು. ಕಳೆ ಕೀಳುವ ಹೊಲ ಉಳುವ ಉಣ್ಣುವ ಮಲಗುವ ಎಲ್ಲ ಸಂದರ್ಭಗಳಲ್ಲಿ ತಿರುನಾಳನ್ನು (ಹಬ್ಬ) ನೆನೆಯುತ್ತಿದ್ದ ತಿರುನಾಳ್ಪೋವ. ಹೀಗೆ ೧೨ ವರ್ಷ ಕಳೆಯಿತು. ಹೋಗಲಾಗಲಿಲ್ಲ. ಅವನ ಬಡತನ ಮತ್ತು ಪರತಂತ್ರತೆ ಎಷ್ಟಿರಬೇಡ?

ಒಂದು ಸಲ ಅವನ ಆಸೆ ಫಲಿಸುವ ಸನ್ನಿವೇಶ ಒದಗಿತು. ಪೊನ್ನಾಂಬಲದ ತಂಡದಲ್ಲಿ ಸೇರಿ ಕೆಲಸ ಮಾಡುವ ಪ್ರಸಂಗ. ತಿರುನಾಳಿಗೆ ನೆಲ್ಲು ಹೊತ್ತು ಒಯ್ಯುವ 'ಬಿಟ್ಟಿ' ಕೆಲಸ ಅದು. ಬೆಳಿಗ್ಗೆದ್ದು ಬ್ರಾಹ್ಮಣ ಬರುತ್ತಾನೆ. ಪೊನ್ನಾಂಬಲಕ್ಕೆ ಬಿಟ್ಟಿ ಕೆಲಸ ಇದೆ ಎಂದು ಹೇಳುತ್ತಾನೆ. ಅದನ್ನು ಕೇಳಿ ತಿರುನಾಳ್ಪೋವ ಸಂಭ್ರಮಿಸುತ್ತಾನೆ; ಹಿಗ್ಗಿ ಹೀರೆಕಾಯಾಗುತ್ತಾನೆ. 'ಐದಾರೇಳೆಂಟು ಹೊರಿಸು' ಎಂದು ಮುಂಬೀಳುತ್ತಾನೆ. ಮಾಮೂಲು ಕೆಲಸಕ್ಕಿಂತ ಹತ್ತು ಪಟ್ಟು ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಮನಸ್ಸು ಮಾಡುವ ಈ ಪ್ರಸಂಗದಿಂದ ದುಡಿಸಿಕೊಳ್ಳುವ ಬ್ರಾಹ್ಮಣನಿಗೇ ಲಾಭವಲ್ಲವೇ? 'ಶಿವಭಕ್ತಿಯ ಚಿತ್ತವನ್ನು ಹೊರುವಂತೆ', 'ತಿರುನಾಳನ್ನು ತಲೆಗೇರಿಸುವಂತೆ' ಮೂಡೆಗಳನ್ನು ಹೊರುತ್ತಾನೆಂದು ಹರಿಹರ ವರ್ಣಿಸುತ್ತಾನೆ. ಸಾವಿರ ಮೂಡೆಗಳನ್ನು ಹೊತ್ತು ಬಿಟ್ಟಿಗರು ಪೊನ್ನಾಂಬಲದತ್ತ ಹೊರಡುತ್ತಾರೆ. ಅವರ ಮಧ್ಯೆ ತಿರುನಾಳ್ಪೋವ ಹಾಡುತ್ತ, ಕುಣಿಯುತ್ತ ಬರುತ್ತಾನೆ. ಸಿರಿ ಸಂಪತ್ತನ್ನು, ಸುರತರು, ಚಿಂತಾಮಣಿಗಳನ್ನು ಆಶಿಸದ ಮನಸ್ಸಿನ ಆತ ಬಿಟ್ಟಿಗಳಲ್ಲಿ ನಡೆಯುತ್ತಿದ್ದನಂತೆ. ' ಎಲೆ ಕಾಲ್ಗಳಿರಾ ಬದುಕಿದಿರಿ, ಎಲೆ ಕೈಗಳಿರಾ ಬದುಕಿದಿರಿ' ಎಂಬ ಧನ್ಯತಾ ಭಾವ ಆವರಿಸುತ್ತದೆ; ಆತನನ್ನು. ಪೊನ್ನಾಂಬಲದಲ್ಲಿ ಮೆರವಣಿಗೆ. ರಾಜವೈಭವದಲ್ಲಿ ಶಿವನ ಉತ್ಸವ ನಡೆಯುತ್ತಿದೆ. ಈ ವಿವರಗಳು ತುಂಬಾ ದೀರ್ಘವಾಗಿವೆ. ಚೋಳದೊರೆ, ಪರಿವಾರ, ವಾದ್ಯ ಮೇಳ, ಸಿರಿವಂತರು, ವ್ಯವಹಾರಿಗಳು, ಸಾಹಸದಾಳು, ಎಲ್ಲೆಲ್ಲೂ ನಿಂತು ನೋಡುವ ಜನಸಾಗರ. ತಿರುಪಾಡು ಓದುತ್ತ ಕರಗುವ ಜನ, ಭಾಷೆಗೊಡುವವರು, ಕಣ್ಣು ಕಿತ್ತು ನಿವಾಳಿಸುವವರು, ನಾನಾ ಚೇಷ್ಟೆಯ ಭಕ್ತರು, ಭಾವುಕರು ಅಲ್ಲಿದ್ದರು. ಮಹಾದೇವಿಯರು, ಮಾಹೇಶ್ವರರು, ಕೆಲಬಲದಲ್ಲಿ ನೆರೆದಿದ್ದಾರೆ. ದೇಗುಲದ ಪೂರ್ವದ ಬಾಗಿಲ ದಿಕ್ಕಿನಲ್ಲಿ ಹಿರಿಯ ಮಾಹೇಶ್ವರರು ನೆರೆದಿದ್ದಾರೆ. ಅಲ್ಲಿ ತಿರುನಾಳ್ಪೋವರು ತನ್ಮಯತೆಯಲ್ಲಿ ಮೂಡೆ ಸಹಿತ ಕುಣಿದಾಡುತ್ತಿದ್ದಾರೆ.

ಶಿವ ಕೈಲಾಸದಲ್ಲಿ ಪಾರ್ವತಿಗೆ 'ನೆನೆವುತ ನೆನೆವುತೆ ತಿರುನಾಳಾದ, ನೆನೆವುತೆ ನೆನೆವುತೆ ಎನ್ನವನಾದ' ಎಂದು ವಿವರಿಸುವನು. ಮತ್ತು ಅಲ್ಲಿ ಒಬ್ಬ ಪೂಜಾರಿಯನ್ನು ಕಳಿಸುವನು. ಆತ ತಿರುನಾಳ್ಪೋವನನ್ನು ಮುಟ್ಟಲು ಹಿಂಜರಿದು ಹಿಂದೆ ಬರುತ್ತಾನೆ. ಭೇದ ಅಭೇದವನ್ನು ತಿಳಿಯದೇ ಬಂದನೆಂದು ಹರಿಹರನ ಮಾತು. ಶಿವ ಈಗ ನಂದೀಶನನ್ನು ಕಳಿಸುತ್ತಾನೆ. ನಂದೀಶ ಬಂದು ತಿರುನಾಳ್ಪೋವರನ್ನು ಅಪ್ಪುತ್ತ, ಜನನವನ್ನು ಇಳಿಪುವ ರೀತಿಯಂತೆ ಮೂಡೆಯನ್ನು ಇಳಿಸಿ ಕೊಂಡದಲ್ಲಿ ಮುಳುಗಿಸುತ್ತಾನೆ.

' ಕುಲಮಂ ಜಲದೊಳಗೆಲ ತೊಳೆವಂದದೆ
ಕುಲಮಂ ಶಿವಕುಲಮಂ ಮಾಳ್ಪಂದದೆ '

ಮುಳುಗಿಸಿದನಂತೆ. 'ಕುಲವಳಿದುದು ಕುಲನಾಮವದಿರ್ದುದು'. ಪುಣ್ಯವೇ ಪುರುಷಾಕಾರವಾಯಿತೋ, ಬೆಳಗಿನ ಬಳಗವು ನೆರೆಯಿತೋ, ಚಂದ್ರನೇ ರೂಪಧಾರಣ ಮಾಡಿದನೊ, ಶಿವಕಾರುಣ್ಯವೇ ರೂಪಾಯಿತೋ, ಶಿವಸಾಮರ್ಥ್ಯವು ಸಂದಣಿಗೊಂಡಿತೋ ಎಂಬಂತಿದ್ದ ತಿರುನಾಳ್ಪೋವ. ಈತ ಈಗ ಶಶಿಕಳೆಯಿಲ್ಲದ ಶಿವ ; ಕರೆಗೊರಲಿಲ್ಲದ ಶಿವ. 'ಶೈವ ಪವಿತ್ರಂ, ಶೈವಾಚಾರ್ಯಂ ; ಶೈವ ಕುಲಾರ್ಕಂ ಶೈವಾಧಾರಂ ' ಇಂಥ ಆತನನ್ನು ನಂದೀಶ ಕೈಹಿಡಿದು ಒಳಹೊಕ್ಕ. ಆತ

'ತಿರುನಾಳಾಗುತೆ ಹರನಾಳಾದ
ಹರನಾಳಾಗುತೆ ತಿರುನಾಳಾದ'

ಬಂದ ಪುಷ್ಪಕ ವಿಮಾನವೇರಿ ಕೈಲಾಸಕ್ಕೆ ಹೊರಟ. ಗಣಪದವಿಯನ್ನು ಪಡೆದ. ಬಿಟ್ಟಿ ಕೆಲಸದ ಬಗ್ಗೆ ಕವಿಗಾಗಲಿ ಸ್ವತಃ ತಿರುನಾಳ್ಪೋವನಿಗಾಗಲಿ ವಿರೋಧವಿಲ್ಲ. ಪೊನ್ನಾಂಬಲಕ್ಕೆ ಹೋಗುವ ಅವಕಾಶ ಸಿಕ್ಕದ್ದೇ ಮಹಾಭಾಗ್ಯವಾಗಿ ಇನ್ನೂ ಹೆಚ್ಚು ಮೂಟೆ ಹೊತ್ತು ಸಾಗುತ್ತಾನೆ. ದೇವಾಲಯದ ಸಂಪರ್ಕದಲ್ಲಿಯೇ ಗಣಪದವಿ ಪ್ರಸ್ತಾಪ ಬರುವುದರಿಂದ ಆತ ದೇಗುಲವನ್ನು ಪ್ರವೇಶಿಸಿರುವ ಕಾರಣ ತೀರಿಹೋಗಿರುವ (ಕೊಲೆಯಾಗಿರುವ?) ಸಾಧ್ಯತೆ ಇದೆ. ಇದು ನಿಜವಾದರೆ ಅಸ್ಪೃಶ್ಯನ ದೇಗುಲ ಪ್ರವೇಶದ ಪ್ರಥಮ ಚಾರಿತ್ರಿಕ ಪ್ರಯತ್ನ ಇದು.

ಪೆರಿಯ ಪುರಾಣದ ತಮಿಳು ಕಥೆಯಲ್ಲಿ ನಂದ ಎಂಬ ಹೊಲೆಯ ಗ್ರಾಮ ಸೇವೆಗಾಗಿ ತನಗೆ ದೊರೆತ ಮಾನ್ಯದ ಭೂಮಿಯಲ್ಲಿ ಬೆಳೆದುದನ್ನು ಪಡೆದು ಜೀವಿಸುತ್ತಿದ್ದ ; ಎಂದಿದೆ. ದೇಗುಲದ ಭೇರಿ ಮೊದಲಾದ ವಾದ್ಯಗಳಿಗೆ ಹದ ಮಾಡಿದ ಚರ್ಮದಿಂದ ಬಾರು, ಮಿಣಿ, ವೀಣೆಗೆ ನರದ ಹುರಿ, ದೇವರಭಿಷೇಕಕ್ಕೆ ಗೋರೋಚನ ಒದಗಿಸುತ್ತಿದ್ದ. ತಿರುಪ್ಪನ್ನೂರೆಂಬ ಶಿವಕ್ಷೇತ್ರದಲ್ಲಿ ಇವನ ದರ್ಶನಕ್ಕೆ ಅಡ್ಡ ಬಂದ ನಂದಿ ಶಿವನ ಆಜ್ಞೆಯಂತೆ ಪಕ್ಕಕ್ಕೆ ಸರಿದ. ಅಲ್ಲಿಯ ಚಿಕ್ಕ ಚಿಲುಮೆಯನ್ನು ಅಗಿದು ದೊಡ್ಡ ಕೊಳ ಮಾಡಿದ. ಚಿದಂಬರಕ್ಕೆ ನಾಳೆ ಹೋಗುತ್ತೇನೆ ಎನ್ನುತ್ತಲೇ ಇದ್ದುದರಿಂದ ' ನಾಳೆ ಹೋಗುವವ' (ನಾಳ್ಪೋವ) ಎಂಬ ಹೆಸರಾಯಿತು. ಕೊನೆಗೊಮ್ಮೆ ಚಿದಂಬರಕ್ಕೆ ಬಂದ. ೩೦೦೦ ಬ್ರಾಹ್ಮಣರು ಯಾಗ ಮಾಡುತ್ತಿದ್ದರು. ಶಿವರಾತ್ರಿ ಕನಸಿನಲ್ಲಿ, ಉರಿಯಲ್ಲಿ ಮಿಂದು ಕೀಳ್ಕುಲದ ಕಸರು ಕಳೆದು ಮೇಲ್ಕುಲದ ಬ್ರಾಹ್ಮಣರೊಡನೆ ಬಾ' ಎಂದ. ಇದೇ ರೀತಿ ೩೦೦೦ ಬ್ರಾಹ್ಮಣರ ಕನಸಿನಲ್ಲಿ ಬಂದು ಭಕ್ತನನ್ನು ಬರಮಾಡಿಕೊಳ್ಳಲು ತಿಳಿಸಿದ. ಮರುದಿನ ಬ್ರಾಹ್ಮಣರು ಗೋಪುರದ ಎದುರು ಅಗ್ನಿಕುಂಡ ಮಾಡಿದರು. ನಂದ ಕುಂಡ ಪ್ರವೇಶಿಸಿ ಪುಣ್ಯ ಶರೀರಿಯಾಗಿ ಎದೆ ಮೇಲೆ ಯಜ್ಞೋಪವೀತದಿಂದ ಬ್ರಾಹ್ಮಣನಂತೆ ಶೋಭಿಸಿದ; ಬ್ರಹ್ಮನಂತೆ ಮೆರೆದ.

ಬ್ರಾಹ್ಮಣರು ನಂದನನ್ನು ಒಳಗೆ ಕರೆದೊಯ್ದರು. ನಂದಮುನಿ ಶಿವ ನಟನವಾಡುವ ಕನಕ ಸಭೆಗೆ ಬಂದ. ಆ ಮೇಲೆ ಯಾರಿಗೂ ಕಾಣಿಸದಾದ.

ಹೀಗೆ ತಮಿಳು ಕಥೆ, ಹೊಲೆಯನನ್ನು ಬೆಂಕಿ ಹೊಗಿಸಿ ಮುನಿಯನ್ನಾಗಿ ಮಾಡಿ ದೇಗುಲ ಪ್ರವೇಶಮಾಡಿಸಿ 'ಮಾಯ' ಮಾಡಿಬಿಡುತ್ತದೆ. ಬಹುಶಃ ಅಗ್ನಿಕುಂಡದಲ್ಲಿ ನಂದ ಸತ್ತುಹೋಗಿರುವ ಸಾಧ್ಯತೆ ಇದೆ. ದಲಿತರ ಬಗೆಗಿನ ಧೋರಣೆ ತಮಿಳಿನಲ್ಲಿ ಹೀಗಿದೆ. ಕನ್ನಡದ ಹರಿಹರನಲ್ಲಿ ಅದು ಹೇಗೆ ಮಾರ್ಪಾಟಾಯಿತು ಎಂದು ತುಲನೆ ಮಾಡುವುದು ತುಂಬ ಅರ್ಥಪೂರ್ಣವಾಗಿದೆ. ಒಟ್ಟಾರೆ ಎರಡೂ ಕಡೆ ಪ್ರಖ್ಯಾತ ಶೈವದೇಗುಲಕ್ಕೆ ದಲಿತನ ಪ್ರವೇಶದ ಸಮಸ್ಯೆ ಇರುವುದು ಖಚಿತ. ಹರಿಹರ ಬ್ರಾಹ್ಮಣರ ಉಲ್ಲೇಖ ಮಾಡುವುದಿಲ್ಲ. ತಮಿಳು ಕಥೆ ಬೆಂಕಿಯಲ್ಲಿ ಹೊಗಿಸಿದರೆ ಕನ್ನಡ ಕಥೆ ನೀರಿನಲ್ಲಿ ಹೊಗಿಸುತ್ತದೆ. ಅಂತೂ ಈ ಪರಿಶುದ್ಧ ಕ್ರಮ ನಡೆದ ನಂತರವೇ ದೇಗುಲ ಪ್ರವೇಶಕ್ಕೆ ಅರ್ಹತೆ ಬರುತ್ತದೆಂದು ಸಾಧಿಸಲಾಗಿದೆ. ಬೆಂಕಿ ಹೊಕ್ಕು ನಂದ ಮುನಿಯಾದ, ಬ್ರಾಹ್ಮಣನಾದ ಎಂದು ತಮಿಳು ಕಥೆ ಹೇಳುವುದು ಗಮನಾರ್ಹ. ಸರ್ವಶ್ರೇಷ್ಠರ ಜತೆ ಅತಿ ಕನಿಷ್ಠನನ್ನು ತುಲನೆ ಮಾಡಿ ಸಮೀಕರಿಸುವುದು ಹೆಚ್ಚು ಮುಖ್ಯ ಅನಿಸುತ್ತದೆ.

ಹಾಗೆ ನೋಡಿದರೆ ನಂದನ ಭಕ್ತಿಯಲ್ಲಿ ಅಂಥ ವಿಶೇಷವೇನೂ ಇಲ್ಲ. ಶಿವನನ್ನು ನಾಳೆಯಾದರೂ ಕಾಣುತ್ತೇನೋ ಎಂಬ ಆತುರದಲ್ಲೇ ದಶಕಗಳನ್ನು ಕಳೆಯುವ ಆತ ಬಿಟ್ಟಿ ಕಾಯಕ ಮಾಡುತ್ತಿರುವಾಗಲೇ ಕುಣಿಯುವ, ಮೈಮರೆಯುವ ಭಾವುಕತೆ, ಭಕ್ತಿ ತೋರುತ್ತಾನೆ. ಇಂಥ ಇವನನ್ನು ಪರಂಪರೆ ಗುರುತಿಸಿ ಕತೆಯಾಗಿ ಮಾಡಿದ್ದೇ ಹೆಚ್ಚು. ೬೩ ಪುರಾತನರಲ್ಲಿ ಸೇರಿಸಿದ್ದು ಗೌರವ. ನಾಳೆಯಾದರೂ ಹೋಗಬೇಕು ಎನ್ನುವುದೇ ಹೆಸರಾಗುವಷ್ಟುಗೆ ಈ ದಲಿತ ಶೋಷಣೆ ಒಳಗಾಗಿದ್ದಾನೆ. ಅವನಿಗೆ ಎಳ್ಳಷ್ಟೂ ಸ್ವಾತಂತ್ರ್ಯವಿಲ್ಲ : ಪುರುಸೊತ್ತಿಲ್ಲ. ಅವನ ಆಶೆ ಈಡೇರುವುದು ಆಕಸ್ಮಿಕವೆಂಬಂತೆ ಬಂದ ಬಿಟ್ಟಿ ಕೆಲಸದ ಮೂಲಕವೇ. ಅನಿರೀಕ್ಷಿತವಾಗಿ ಒದಗುವ ಈ ಸಂದರ್ಭದಲ್ಲಿ ದೇಗುಲ ಪ್ರವೇಶಿಸುವ ಮಹತ್ವದ ಘಟನೆ ನಡೆದುದರಿಂದಲೇ ಆತ ಖ್ಯಾತಿಗೆ ಬಂದಿರುವ ಸಾಧ್ಯತೆ ಇದೆ. ಬಡವರಾದ ಶಿವಭಕ್ತರು ತಮ್ಮ ಕೆಲಸವನ್ನೇ ಭಕ್ತಿಸಾಧನ ಮಾಡಿಕೊಳ್ಳಲು ಕಾರಣ ಅವರಿಗೆ ಶಿವಭಕ್ತಿಯನ್ನು ಆಚರಿಸಲು ಬಿಡುವೇ ಇರಲಿಲ್ಲ. ದುಡಿಮೆಗಾರರಿಗೆ ದುಡಿಮೆಯೇ ಕೈಲಾಸವಾಗಬೇಕಿತ್ತು; ಕಾಯಕವೇ ಕೈಲಾಸ ಎಂಬುದರ ದುರಂತ ಇದು. ಶಿವ ಕೂಡ ಅವರವರ ಯೋಗ್ಯತೆ; ಸಾಮಾಜಿಕ ಮಟ್ಟಕ್ಕೆ ಅನುಗುಣವಾದ ಕಷ್ಟ ಕೊಡುವುದನ್ನು ಗಮನಿಸಬಹುದು. ಇದು ಭಕ್ತರಿಗೆ ಬರುವ ಕಷ್ಟಗಳು ಪರೀಕ್ಷೆಗಳೆಂದು ಭಾವಿಸಿರುವುದರ ಪರಿಣಾಮ. ಶಿವ ಒಂದು ನಿಮಿತ್ತ ಅಷ್ಟೇ. ಕುಲದ ಕಾರಣಕ್ಕಾಗಿಯೇ ತಿರುನಾಳ್ಪೋವ ಕಷ್ಟವನ್ನೆದುರಿಸುತ್ತಾನೆ. ಬಿಟ್ಟಿ ಕೆಲಸ, ಕುಲದ ಸೂತಕ ಅವನ ಸಮಸ್ಯೆಯ ಕೇಂದ್ರಗಳು. ಅವನನ್ನು ಶಿವ ಪರೀಕ್ಷೆ ಮಾಡಲು ಬರುವ ಪ್ರಸಂಗವೇ ಇಲ್ಲ. 'ನಾಳೆ ಹೋಗಿ ನೋಡಬೇಕು' ಎಂಬ ಆಶೆಯೇ ಅವನ ಆತುರ ಹೆಚ್ಚಿಸಿದೆ, ಭಕ್ತಿಯನ್ನು ಬಲಿಸಿದೆ.

ದಲಿತರ ಕುರಿತು ಚರ್ಚಿಸುವಾಗ ಇನ್ನೊಂದು ಮುಖ್ಯ ಅಂಶವನ್ನು ಗುರುತಿಸಬೇಕಿದೆ. ತಮ್ಮ ಕುಟುಂಬದ ಸ್ವಾರ್ಥಕ್ಕಲ್ಲ, ತಮ್ಮ ಕೇರಿಗಲ್ಲ, ಇಡೀ ಊರಿನ ದನ ಜನ ಬೆಳೆಗಳ ಸುಖ ಸಮೃದ್ಧಿಗಾಗಿ ಮಾಡುತ್ತಿದ್ದ ಗ್ರಾಮೊಟ್ಟಿನ ವಿಧಿಯಾಚರಣೆ, ಹಬ್ಬ, ಜಾತ್ರೆಗಳ ಸಂದರ್ಭಗಳಲ್ಲಿ ದಲಿತರು ತುಂಬ ರಿಸ್ಕಿ ಆಚರಣೆಗಳನ್ನು ಪೂರೈಸುತ್ತಿದ್ದರು. ಈಗಲೂ ಈ ಪದ್ಧತಿ ಮುಂದುವರೆದಿದೆ. ದೈವಕ್ಕೆ ಕಾಡುವ, ಕಾಪಾಡುವ, ದ್ವಿಧಾ ನೆಲೆಯಿದೆ ಎಂಬ ನಂಬಿಕೆಯಿದೆಯಲ್ಲವೇ? ಕಾಪಾಡುವ ದೈವದ ಗುತ್ತಿಗೆ ಹಿಡಿದುದು ಮೇಲ್ಜಾತಿ, ಮೇಲ್ವರ್ಗ. ಕಾಡುವ ದೈವದ ಕೋಪವನ್ನು ತಣಿಸುವುದು ಕೆಳಜಾತಿ, ಕೆಳವರ್ಗ. ಕಾಡುವ ದೈವದ ಸಿಟ್ಟನ್ನೆದುರಿಸಿ ಅದನ್ನು ಸಂತೃಪ್ತಗೊಳಿಸಿ ಸಮಾಜ ಸ್ವಾಸ್ಥ್ಯವನ್ನು ಕಾಪಾಡುವ ಕೆಲಸ ದಲಿತರದು. ಶ್ರೇಣೀಕೃತ ಸಮಾಜದ ವಿಕೃತ ಸ್ಥಿತಿಗೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೇ?

೬೩ ಪುರಾತನರಲ್ಲಿ ಮತ್ತು ಕರ್ನಾಟಕದ ಶಿವಶರಣರಲ್ಲಿ ಅನೇಕ ಜನ ಶೂದ್ರ ಕುಲದವರು. ಉದಾ: ಪಾಹಿಲ್ಯರು, ಮೊನೆಯಿಡುವರು, ಅತಿಭಕ್ತಿ (ಮೀನುಗಾರ), ಚಿರುತೊಣೆಯಾಂಡ, ಕಣ್ಣಪ್ಪ, ಏಣಾಧಿನಾಥ (ಈಡಿಗ) ಮುಂತಾದವರು. ಕಡುಬಡವರಾದ, ಗುಲಾಮರಾದ ಭಕ್ತರ ಕಥೆಗಳೂ ಇವೆ: ಉದಾ: ಕಲಿಕಂಪರು ದಾಸ. ಶಿವಭಕ್ತನಾಗಿ ಒಡೆಯನ ಮನೆಗೆ ಬಂದಾಗ ಒಡೆಯ ಆತ ಶಿವನೆಂದೇ ಭಾವಿಸಿ ಪಾದ ತೊಳೆಯುತ್ತಾನೆ. ಆದರೆ ಅವನ ಹೆಂಡತಿ 'ಈತ ನಮ್ಮ ಕೆಲಸ ನೀಗದೇ ಹೋಗಿ ಶಿವಭಕ್ತನಾದ' ಎಂದು ನೀರು ನೀಡುವುದಿಲ್ಲ. ಒಡೆಯ ಆಕೆಯ ಕೈ ಕಡಿಯುತ್ತಾನೆ.

ಈವರೆಗೆ ದಲಿತರೇ ಪ್ರಧಾನ ಪಾತ್ರವಿದ್ದ ರಗಳೆಗಳ ಕಥೆಗಳನ್ನು ನೋಡಿದೆವು. ಈಗ ಬಸವಾದಿ ಶರಣರ ಕತೆಗಳ ಸಂದರ್ಭಗಳಲ್ಲಿ ಬಂದು ಹೋಗುವ ದಲಿತ ಪಾತ್ರಗಳ ಬಗ್ಗೆ ನೋಡಬಹುದು.

ಸಂಬೋಳಿ ನಾಗಿದೇವ :

ಕರ್ನಾಟಕದ ೧೨ ನೇ ಶತಮಾನದ ಭಕ್ತಿ ಚಳುವಳಿಯ ಸಂದರ್ಭದ ಕಿರೀಟಪ್ರಾಯ ವ್ಯಕ್ತಿ ಬಸವಣ್ಣ. ಆತ ತನ್ನ ವಚನಗಳಲ್ಲಿ ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ ಮೊದಲಾದ ದಲಿತ ಶರಣರನ್ನು ಅಪ್ಪ, ಬೊಪ್ಪ ಎಂದೂ, ಅವರ ಮನೆಯ ದಾಸರ ದಾಸನೆಂದೂ ಹೇಳುವ ಮೂಲಕ ಬ್ರಾಹ್ಮಣನೆಂಬ ಪ್ರತಿಷ್ಠೆಯ ವಿರುದ್ಧ ಹೋರಾಡುತ್ತಾನೆ. ದಲಿತ ಸಮಸ್ಯೆಗೆ ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸುತ್ತಾನೆ. ಅಂಥ ಅಪರೂಪದ ವ್ಯಕ್ತಿಯ ಚಿತ್ರ ಬರೆಯುವಾಗ ಹರಿಹರ ಸಂಬೋಳಿ ನಾಗಿದೇವನ ಪ್ರಸಂಗ ಕಲ್ಪಿಸಿದ್ದಾನೆ. ಶರಣರಿಗಿದ್ದ ದಲಿತರ ಬಗೆಗಿನ ಉದಾತ್ತ ಮನೋಭಾವಕ್ಕೆ ಈ ಪ್ರಸಂಗ ಕನ್ನಡಿ ಹಿಡಿದಿದೆ.

ಬಸವರಾಜದೇವರ ರಗಳೆಯಲ್ಲಿ ೧೦ ನೇ ಸ್ಥಲ ಸಂಬೋಳಿ ನಾಗಿದೇವನ ಕಥೆಯನ್ನು ಒಳಗೊಂಡಿದೆ. ಇಂದಿಗೂ ಲಕ್ಷಾಂತರ ಜನ ಸೇರುವ ಮೈಲಾರ ಜಾತ್ರೆಯಲ್ಲಿ (ದೇವರಗುಡ್ಡ

ಮತ್ತು ಮೈಲಾರ) ಕಾಲಿಗೆ ದಪ್ಪ ಉಗನಿ ಗೂಟ ಹೊಡಕೊಂಡು ಮುಳ್ಳು ಹಾಯಿಸಿಕೊಳ್ಳುವ ಪವಾಡ ಮಾಡುವವರು ಕಂಚಾವೀರರೆಂಬ ದಲಿತರು. ಹಿಂದೆ ಇವರು ತಲೆಯನ್ನೇ ಕಡಿದಿಡುತ್ತಿದ್ದರೆಂಬ ಐತಿಹ್ಯಗಳಿವೆ. ಗ್ರಾಮದೇವಿಯರ (ದ್ಯಾಮವ್ವ, ಊರಮ್ಮ, ಮಾರೆಮ್ಮ) ಹಬ್ಬಗಳಲ್ಲಿ 'ಭೂತಬಲಿಗಾಡು' ಆಗಿ ಊರಸುತ್ತ ಚರಗ ಚೆಲ್ಲುವ ಭೀಕರ ಕೆಲಸ ದಲಿತರದ್ದೇ. ಕರಾವಳಿ ಪ್ರದೇಶದಲ್ಲಿ ಭೂತಗಳಾಗುವವರು ನಲ್ಕೆ, ಪಂಬದ, ಪರವ ಎಂಬ ದಲಿತರೇ. ಇಂಥ ನಿದರ್ಶನಗಳು ಸಾಕಷ್ಟಿವೆ. ಮಾಹೇಶ್ವರರ ಕರುಣೆ ೧೨೦೦೦ ಮನ್ನಣೆಯ ಭಕ್ತರ ನಡುವೆ ಬಸವ ಸುಖದಿಂದಿದ್ದ. ಒಂದು ದಿನ ಕೆಲಬಲದ ಪರಿಜನ ನೆಲನನುಗ್ಗಡಿಸೆ ಚಾಮರ ಸೀಗುರಿ ಇಕ್ಕುತ್ತಿರಲು, ಶಂಖಧ್ವನಿ, ಬಿರುದಿನ ಕಹಳೆ ಕೂಗಲು ಬಸವಣ್ಣ ಪುರದಿಂದ ಹೊರಬಂದು ಹಿರಿಯ ಮಾಹೇಶ್ವರರ ಕೇರಿಗಳ ಕೆಲದಲ್ಲಿ ನಡೆದು ಬರುವಾಗ 'ಓಹಿಲಯ್ಯಂಗೆ ಹಿತಾರ್ಥ, ಉದ್ಭಟಯ್ಯಂಗೆ ಹಿತಾರ್ಥ, ಬಸವರಾಜಂಗೆ ಹಿತಾರ್ಥ ಆರೋಗಿಸು' ಎಂಬ ಶಿವಲಿಂಗದ ಆರೋಹಣೆ ಸಮಯದ ದಿವ್ಯವಾಕ್ಯಗಳನ್ನು ಕೇಳಿ ಸಂತೋಷವಾಗಿ, ದಂಡಿಗೆಯಿಂದ ಇಳಿದು, ಸಂಬೋಳಿ ನಾಗಿದೇವನೆಂಬ ಹಿರಿಯ ಮಾಹೇಶ್ವರನ ಮನೆಯ ಹೊಕ್ಕು ಸಂಗ ಪ್ರಸಾದದಲ್ಲಿ ಅವರ ಪ್ರಸಾದ ಬೆರಸಿ ಕೈಕೊಳ್ಳುತ್ತಿದ್ದ. ಇವನ ಜತೆ ಬರುತ್ತಿದ್ದ ವೈಷ್ಣವರ ಬೇಹಿನ ಸಾಹಸಿಗನೊಬ್ಬ ಪುರಕ್ಕೆ ಓಡಿಬಂದು, ಬಸವನ ಚರಿತ್ರವನ್ನು ಅಜ್ಞಾನಿಗಳಾದ ವಿಪ್ರಕುಲಕ್ಕೆ ಹೇಳಲು, ನಾರಣಕ್ರಮಿತ, ಕೃಷ್ಣಪೆದ್ದಿ, ವಿಷ್ಣುಭಟ್ಟ, ಮೊದಲಾದ (ಇನ್ನೂ ೧೪ ಬ್ರಾಹ್ಮಣರ ಹೆಸರಿವೆ) ಛಾಂದಸರು, ವೇದಜಡರು, ಮುಟ್ಟಿಯ ಮರುಳ್ಗಳು, ಹೆರ್ಬೇಸಿಗಳು, ದರ್ಭೆಯ ನಿರ್ಭಾಗ್ಯರು ಅರಮನೆಗೆ ಬಂದು, "ಎಲೆ ಭೂಪಾ, ಬಸವನ ನಡುವಳಿ ದಿನದಿನಕ್ಕೆ ವಿಪರೀತವಾಗುತ್ತಿದೆ, ಹಿರಿಯ ಮಾಹೇಶ್ವರರೆಂದು ಸೇರಿಸಿಕೊಂಡಿರುವುದಲ್ಲದೇ ಇಂದೀಗ ಪೊಲಗೇರಿಯಲ್ಲಿ ಒಬ್ಬ-ಪೊಲೆಯನೆಂದಡೆ ಕೊಲುವನು-ಹಿರಿಯ ಭಕ್ತನ ಮನೆಯೊಳುಂಡು; ಉಂಡುದಲ್ಲದೇ ನಿನ್ನ ಓಲಗದೊಳು ಪೊಲೆಗಲಸಲು ಬರುವನು. ನಮಗೆ ಇರಲಾಗದು" ಹೀಗೆ ಹೇಳಿದ ಅವರನ್ನು ಸಂತೈಸಿ, ಬಸವನನ್ನು ಕರೆಯಿರಿ ಎಂದು ಬಿಜ್ಜಳ ಆಳುಗಳನ್ನು ಕಳಿಸುತ್ತಾನೆ. ಬಸವ ಓಲಗದ ಮನೆಯನ್ನು ಹೋಗುವನೆಂದು ರಾಜಾಂಗಣದ ಬಯಲಲ್ಲಿ ಓಲಗಗೊಡುವನು. ಬಸವ ಬಂದ ನಂತರ, 'ಎಲೆ ಬಸವಣ್ಣಾ ವಿಪ್ರಕುಲಕ್ಕೆ ಅನುಕೂಲವಾದ ಶಿವಭಕ್ತಿ ಹೊಂದಿ, ಸದಾಚಾರದಿಂದ ಸುಖಿಯಾಗಿರುವುದ ಬಿಟ್ಟು, ಅತಿಭಕ್ತಿ ತಲೆಗೇರಿ ಹಿರಿಯ ಮಾಹೇಶ್ವರರೆಂದು ಪೊಲೆಗಲಸಿ ಅವರ ಮನೆಯೊಳುಂಡುದಲ್ಲದೇ ಇಲ್ಲಿಗೆ ಬಂದು ನಮ್ಮ ಗೋಜಾಗತೆ ಮಾಡುವುದು ಸರಿಯಲ್ಲ.' ಎನ್ನುತ್ತಾನೆ. ಈ ವಿಪ್ರಪ್ರೇರಕ ರಾಜನ ಮಾತಿಗೆ 'ಬುದ್ಧಿಯಿಲ್ಲದ ಭೂಪಾ, ಎರಗಿವಿಯ ಮರುಳೆ, ನಾರಣಕ್ರಮಿತರ ಕೇರಿಯನ್ನು ಹೊಕ್ಕೆನೆ? ಮುಕುಂದಭಟ್ಟರ ಮನೆಯಲುಂಡೆನೆ? ಸೌರಿ ಪೆದ್ದಿಗಳ ಹತ್ತಿರ ನಿಂತೆನೆ? ದಾಮೋರಭಟ್ಟನಂ ಪ್ರೇಮದಿಂದ ಸೋಂಕಿದೆನೆ? ಕೇಶವಘೆಯಿಸರ ವಾಸನೆಯುಂಟೇ? ಹರನರಿಯದ ಹೊಲೆಯರ ಮನೆಯನ್ನು ಹೋಗಲಿಲ್ಲ" ಎಂಬುದು ಶಿವಪ್ರೇರಕ ಬಸವನ ನುಡಿ. ಬಿಜ್ಜಳನಿಗೆ ಕೋಪ ಉಕ್ಕುತ್ತದೆ. 'ಇಂತು ನುಡಿವರೆ ಭಂಡಾರಿ ಬಸವಾ? ವೇದಶಾಸ್ತ್ರ,

ಪುರಾಣ, ಆಗಮ, ಯಜ್ಞವಿಧಿಯಿಂದ ನಡೆವ ವಿಪ್ರರನ್ನು ಹೊಲೆಯರೆಂದು, ಶಿವಭಕ್ತನಾದ ಹೊಲೆಯನನ್ನು ಉತ್ತಮನೆಂಬುದಕ್ಕೆ ಪ್ರಮಾಣವೇನು? ವಿಪ್ರರ ಮೈ ಕೊಯ್ದರೆ ನೆತ್ತರು ಸುರಿದು, ಭಕ್ತರ ಮೈಯಲ್ಲಿ ಹಾಲು ಸುರಿಯುವುದೇ? ಬೇಡ ಬೇಡ ಸಮಯಪಕ್ಷನೊಳಪ್ಪುದಲ್ಲ. ಅತಿರೇಕವೇಕೆ? ಹದುಳವಿದ್ದರೆ ಸಾಕು'. ಎಂದು ಅರಸ ಹೇಳಿದ್ದು ಕೇಳಿ ಬಸವ ನಸುನಗುತ್ತ 'ತಪ್ಪದು ಎಲೆ ಅರಸಾ, ನೀನೆಂದಂತೆ ವಿಪ್ರರ ಮೈಯಲ್ಲಿ ನೆತ್ತರು, ಭಕ್ತರ ಮೈಯಲ್ಲಿ ಹಾಲು ಸುರಿಯದಿದ್ದರೆ ಸಂಗಂಗೆ ದೂರ, ಶರಣರಿಗೆ ದೂರ ನೋಡು' ಎಂದು ಹೇಳಿ ಗಳಗಳನೆ ಹಿರಿಯ ಕೇರಿಗೆ ನಡೆದು ಬಂದು ಸಂಬೋಳಿಯ ನಾಗಿದೇವನನ್ನು ಅಂದಣದಲ್ಲಿ ಕುಳ್ಳಿರಿಸಿ ತಾನು ಪಕ್ಕಕ್ಕೆ ನಡೆದು ಬರುತ್ತ 'ನೀನಿರ್ದ ಕುಲವೇ ಸತ್ಕುಲ' ಎಂದು ಹಾಡು ಹೇಳುತ್ತ ದಂಡಿಗೆಯಿಂದ ಉಪಮನ್ಯು ದೇವರ ಇಳಿಸುವಂತೆ ಕೈಕೊಟ್ಟು ಆಸ್ಥಾನದ ನಡುವೆ ಇಳಿಸಿ 'ಕರೆ ನಿನ್ನ ಕರ್ಮ ಜಡರನ್ನು' ಎಂದು ಕರೆಸಿ, ಬಂದ ವಿಪ್ರರಲ್ಲಿ ಒಬ್ಬನ ಮೈ ಸೀಳಲು ನೆತ್ತರು, ಬಾಲಹುಳು ಸುರಿದವು. ಅರಸ ಹೇಸಿಕೊಂಡ. 'ತೆಗೆ ತೆಗೆ' ಎಂದ. ಬಸವ 'ಇತ್ತ ನೋಡು ಅರಸಾ' ಎಂದು ಶಿವನನ್ನು ನೆನೆದು ಶಿವನ ಪಾದದಂತಿದ್ದ ಶರಣನ ಪಾದವನ್ನು ಹಿಡಿದು ಸುರಧೇನುವಿನ ಮೊಲೆ ಹಿಂಡುವಂತೆ ಉಂಗುಟದ ಮೊನೆಯನ್ನು ಹಿಂಡಿದಾಗ ಹಾಲೊರತೆ ಹಾಲುಹಳ್ಳ ಹರಿದು ಓಲಗದಲ್ಲಿ ಮಡುಗಟ್ಟಿತು. ಬಿಜ್ಜಳನಿಗೆ ಕೌತುಕ ; ಭಯ ; ಶರಣರಿಗೆ ಖುಷಿ ; ಪರವಾದಿಗಳು ಮೆಲ್ಲಗೇ ಸರಿದುಹೋದರು. 'ಶಿವಭಕ್ತರ ಮೈಯಲ್ಲಿ ಸುಧಾರಸವಲ್ಲದೇ ಬೇರಿಲ್ಲ; ನಿನ್ನ ವೇದ ಜಡರ ಮಾತು ಮೇರೇಗೆಡಿಸಿತ್ತು. ಕರ್ಮಿಗಳ ಸಂಗ ಹಿರಿಮೆಗೆಡಿಸಿತ್ತು, ಇನ್ನಾದರೂ ಶರಣರನ್ನು ನಂಬು ಎಂದು ಹೇಳುತ್ತಾನೆ, ಬಸವ. ಸಂಬೋಳಿನಾಗಿದೇವನನ್ನು ಆನೆ ಮೇಲೆ ಏರಿಸಿ, ಪುರದಲ್ಲಿ ಮೆರೆಸಿ, ತನ್ನ ಮಹಾಮನೆಗೆ ಬಂದು, ಆನೆಯಿಂದಿಳಿಸಿ, ಗದ್ದುಗೆಯಿತ್ತು ಉಡಕೊಟ್ಟು, ಆರಾಧಿಸಿ ಕಳಿಸಿ ಬಸವ ಚಿಂತಾರತ್ನದಂತೆ ಮೆರೆಯುತ್ತಿದ್ದ.

ತಮಿಳು ಭಕ್ತಿ ಪರಂಪರೆಯಲ್ಲೇ ನಡೆದ ೧೨ನೇ ಶತಮಾನದ ಕನ್ನಡ ಶರಣರು ದಲಿತರ ಪರ ನಿಂತುದು ಸಹಜವೇ. ಸಾಂಪ್ರದಾಯಿಕ ನಂಬಿಕೆಯ ಪ್ರಕಾರ ದಲಿತ ಮತ್ತು ಬ್ರಾಹ್ಮಣ ಹುಡುಗ ಹುಡುಗಿಯ ಮದುವೆ ಮಾಡಿದ್ದು ಸಂಘರ್ಷಕ್ಕೆ ಕಾರಣವಾಗುತ್ತದೆ. ಕಲ್ಯಾಣದ ಶರಣರು ಹೋರಾಟ ಮಾಡುತ್ತ ಚೆಲ್ಲವರಿದು ಹೋಗುತ್ತಾರೆ. ಹೀಗೆ ಚಳುವಳಿ ತನ್ನ ಚರಮಸೀಮೆ ಮುಟ್ಟಿದ್ದು ದಲಿತ ಪ್ರಶ್ನೆಯಿಂದಾಗಿಯೇ.

ಬಸವ ದಲಿತ ಮತ್ತು ಬ್ರಾಹ್ಮಣರ ಹೋಲಿಕೆಯಲ್ಲಿ ದಲಿತನನ್ನು ಎತ್ತಿ ಹಿಡಿದು ಬ್ರಾಹ್ಮಣರನ್ನು ಕೀಳೆಂದು ಸಾಧಿಸುತ್ತಿರುವುದು ಅಂದಿನ ಸ್ಥಿತಿಯಲ್ಲಿ ಕ್ರಾಂತಿಕಾರಿ ಸಂದರ್ಭವೇ. ಈ ಸಂದರ್ಭದಲ್ಲಿ ಬಸವ ಗೆಲ್ಲುವುದು ಪವಾಡದ ಮೂಲಕ. ಇದು ಬರೀ ಸಂಕೇತವಿರಬಹುದು. ಆದರೆ ಅದು ಎತ್ತಿದ ಪ್ರಶ್ನೆ ಅತ್ಯಂತ ಮಹತ್ವದ್ದಾಗಿತ್ತು.

ಕೆಂಭಾವಿ ಭೋಗಣ್ಣ :

ಕೆಂಭಾವಿ ಶಿವಪುರ. ಅಲ್ಲಿ ಜಂಗಮಪ್ರೇಮಿ ಭಕ್ತ ಭೋಗಣ್ಣ. ಶಿವಭಕ್ತರಲ್ಲಿ ಜಾತಿಯನ್ನು ವಿಚಾರಿಸುವವನಲ್ಲ ; ಭೇದ ಕಲ್ಪಿಸುವವನಲ್ಲ. ವೇಷವಿದ್ದಲ್ಲಿ ಶಿವನಿರುವನು ಎಂದು ನಂಬಿದವ.

ಒಂದು ದಿನ ಶಿವ ಹೆಗಲ ಮೇಲೆ ಮಿಳಿ, ಕೈಯಲ್ಲಿ ಸಂಬಳಿಗೋಲು ಹಿಡಿದು, ವಿಭೂತಿ, ರುದ್ರಾಕ್ಷಿ ಧರಿಸಿ 'ಹಿರಿಯ ವೇಷ'ದಲ್ಲಿ ಬಂದ. ಭೋಗಣ್ಣ ಅವನಿಗೆ ನಮಿಸಿ ಪಾದೋದಕವನ್ನು ಪಡೆದು, ಪೂಜಿಸಿ ಊಟಕ್ಕಿಟ್ಟ. ವಿಪ್ರರೆಲ್ಲ ಇದನ್ನು ಗಮನಿಸುತ್ತಿದ್ದರು. ಅವರ ಪ್ರಸಾದ ತಾನು ಸ್ವೀಕರಿಸಿದ. ವಿಪ್ರರು ಚಂದಿಮರಸನಲ್ಲಿ ಬಂದು 'ಭೋಗಣ್ಣ ಹೊಲಗಲಸಿ, ನೆಲೆಗೆಟ್ಟು, ಕುಲವಳಿದು ಹೊಲೆಯನೆನ್ನದೇ ಹಿರಿಯಭಕ್ತನೆಂದು ಭಾವಿಸಿ, ವಿಪ್ರಕರ್ಮವನ್ನೆಲ್ಲ ಹುಸಿ ಮಾಡಿದ ; ಕುಲವೆಲ್ಲ ನಿರ್ಮೂಲ ಮಾಡಿದ. ಆತನಿರಲಿ ಇಲ್ಲ ನಾವಿರಲಿ ' ಎಂದರು. ಚಂದಿಮರಸ ಭೋಗಣ್ಣನನ್ನು ಕರೆಸಿದ. ಶಿವನ ಅವತಾರದಂತೆ ಬಂದು ನಿಂತ ಭೋಗಣ್ಣ. 'ಪುರದಲ್ಲಿ ಅಕೃತ್ಯ ಮಾಡುತ್ತಾರೆಯೇ? ಹೊಲೆಯರನ್ನು ಹೊಗಿಸಿ ಬಾಳುತ್ತಾರೆಯೇ?' ಎಂದ. 'ಅರಸಾ ಮನೆಯಲ್ಲಿ ಹೊಲೆಯರನ್ನು ಹೊಗಿಸಿಲ್ಲ. ನಾರಣಕ್ರಮಿತರನ್ನು ಹೊಗಿಸಿಲ್ಲ. ಸೂರಿಭಟ್ಟರನ್ನು ಹೊಗಿಸಿಲ್ಲ. ಕೃಷ್ಣಪೆದ್ದಿ, ವಿಷ್ಣುಭಟ್ಟರನ್ನು ಹೊಗಿಸಿಲ್ಲ, ಶಿವನನ್ನು ಅರಿಯದ ಹೊಲೆಯರನ್ನು ಹೊಗಿಸಿಲ್ಲ, ಶಿವಭಕ್ತನನ್ನು ಹೊಗಿಸಿದ್ದು ತಪ್ಪೇ?' ಎಂದು ಉತ್ತರಿಸಿದ. 'ವಿಪ್ರರು ಹೊಲೆಯರೇ? ಊರು ಬಿಟ್ಟು ಹೋಗು' ಎಂದು ಅರಸ ಸಿಟ್ಟಾದ. ಲಿಂಗವಂತ ಭೋಗಣ್ಣ ಊರಿಂದ ಹೊರಟ. ಪುರದ ಲಿಂಗಗಳೆಲ್ಲ ಅವನ ಹಿಂದೆ ಹೊರಟವು. ಈ ಲಿಂಗ ಆ ಜಂಗಮ ಒಂದೇ. ಶಿವಲಿಂಗಗಳನ್ನು ಪೂಜಿಸುತ್ತ ಸಂಭ್ರಮದಲ್ಲಿ ಹೊರಟ ಭೋಗಣ್ಣ. ವಿಪ್ರರು ಶಿವದೇಗುಲಗಳಿಗೆ ಬಂದು ನೋಡಿದರೆ ಬರೀ ಪೀಠಗಳು. ಭೋಗಣ್ಣನೊಡನೆ ಎಲ್ಲವೂ ಒಕ್ಕಲಾದವು. ವಿಪ್ರರು ಅರಸನಿಗೆ ಹೇಳಿದರು. ಚಂದಿಮರಸ ಪಶ್ಚಾತ್ತಾಪ ಪಟ್ಟು, ಮೆರವಣಿಗೆಯಲ್ಲಿ ಬಂದು ಭೋಗಣ್ಣನಿಗೆ ವಿನಂತಿಸಿಕೊಳ್ಳುತ್ತಾನೆ. ಕಾರುಣ್ಯ ತಾಳಿ ಭೋಗಣ್ಣ ' ದೇವರಂ ದೇವಿಯರಂ ಒಂದು ಮಾಡುವೆನೆಂದು ' ಹಿಂದಿರಿಗಿ ಬಂದ ತನ್ನ ಜತೆ ಬರುವ ಶಿವಲಿಂಗಗಳಿಗೆ ಭೋಗಣ್ಣ ದೇವಿಯರನಗಲಿ ಇಂತೆನ್ನೊಡನೆ ಬರ್ಪರೇ ? ಎಂದು ಕೇಳುತ್ತಿದ್ದ. ಹಿಂದಿರುಗಿದಾಗ ಸಂಭ್ರಮದಿಂದ ಬಂದ ಲಿಂಗಗಳು ಸ್ಥಾನಪಲ್ಲಟಗೊಂಡು ಕಿರಿಯ ಪೀಠದಲ್ಲಿ ಹಿರಿಯ ಲಿಂಗ ಕೂತವು. ಹೀಗೆ ಶಿವಶಕ್ತಿ ವಿವಾಹವಾಯಿತು. ಪುಷ್ಪಕ ಬಂತು. ಭೋಗಣ್ಣ ಹತ್ತಿ ಹೊರಟ. ಶಿವ ಅವನನ್ನು ಸ್ವಾಗತಿಸಿ ಸಾರೂಪ್ಯ ಪದವಿ ನೀಡಿದ.

ಭೋಗಣ್ಣನದು ವಿಪ್ರಕುಲ. ಜಾತಿಯನ್ನು ನಿರ್ಲಕ್ಷಿಸುವ ಮೂಲಕ ಸಂಪ್ರದಾಯವಾದಿ ವಿಪ್ರರಿಗೆ ಆಘಾತವನ್ನುಂಟು ಮಾಡಿದ. ಅಗ್ರಹಾರಗಳಲ್ಲಿ ಶಿವಭಕ್ತರಾದ ಬ್ರಾಹ್ಮಣರಿದ್ದರು. ಅವರು ಶೈವ ತತ್ವನಿಷ್ಠೆಗೆ ಹೋರಾಡಿ ಸತ್ತರು; ಎಂಬುದನ್ನು ಈ ರಗಳೆ ಸೂಚಿಸುತ್ತದೆ. ಬಸವಣ್ಣ, ಕೊಂಡುಗುಳಿ ಕೇಶರಾಜ, ಭೋಗಣ್ಣ ಇಂಥ ಹಲವಾರು

ಬ್ರಾಹ್ಮಣರು ಅಗ್ರಹಾರ ಬ್ರಾಹ್ಮಣಿಕೆಯನ್ನು ತಿರಸ್ಕರಿಸಿ ಹೊರಬಂದವರು. ಶಿವಭಕ್ತರಾದ ಅಸ್ಪೃಶ್ಯರ ಪರ ನಿಂತು ಸೆಣಸಿದವರು. ಹಿರಿಯವೇಷ, ಹಿರಿಯ ಕುಲ, ಹಿರಿಯ ಭಕ್ತ ಇವೆಲ್ಲ ಹೊಲೆಯ ಅಥವಾ ಮಾದಿಗ ಜಾತಿಗೆ ಸೇರಿದ ಶೈವರನ್ನು ಕುರಿತು ವೀರಶೈವ ಕವಿಗಳು ಬಳಸಿದ ಪದಗಳು. ಹೊಲೆಯ ವಿರುದ್ಧ ಬ್ರಾಹ್ಮಣ ಸಂಘರ್ಷದಲ್ಲಿ ಶೈವಮತ ಸಮಾನತೆ ಹೇಳಿತು.

ಬಳಿದೊತ್ತು :

ನಂಬಿಯಣ್ಣನ ರಗಳೆಯಲ್ಲಿ ದಲಿತ ಪಾತ್ರಗಳಾವುವೂ ಇಲ್ಲ. ಆದರೆ ಸಾಮಂತಶಾಹಿ ಕಾಲದಲ್ಲಿ ದಲಿತರು ಬಹುತೇಕ ಬಳಿದೊತ್ತುಗಳಾಗಿ ಜೀವಿಸುವ ಹೀನ ಸ್ಥಿತಿಯಿತ್ತು. ವಂಶಪಾರಂಪರ್ಯವಾಗಿ ಗುಲಾಮರಾಗಿರುವ ಪದ್ಧತಿಯೇ ಬಳಿದೊತ್ತು. ಈ ಸ್ಥಿತಿಯೇ ಇಂದಿಗೂ ದಲಿತರನ್ನು ಸಮಾಜದ ಕಟ್ಟ ಕಡೆಯ ಶೋಷಿತ ಅಸ್ಪೃಶ್ಯ ವ್ಯಕ್ತಿಯನ್ನಾಗಿ ಮಾಡಿರುವ ಸಾಧ್ಯತೆ ಇದೆ. ಅಂಥ ಬಳಿದೊತ್ತಿನ ವಿವರಗಳು ತುಂಬ ಚನ್ನಾಗಿ ಪ್ರಕಟವಾಗಿದ್ದು ನಂಬಿಯಣ್ಣನ ರಗಳೆಯಲ್ಲಿ. ಇದು ಪ್ರತ್ಯೇಕವಾಗಿ ಚರ್ಚಿತವಾಗಬೇಕಾಗಿರುವ ವಿಷಯವಾದ್ದರಿಂದ ಇಲ್ಲಿ ಅದನ್ನು ಹಿಗ್ಗಿಸಲಾಗದು.

ಭಕ್ತಿಪಂಥ ಸಾಮಂತಶಾಹಿ ಸಾಮಾಜಿಕಾರ್ಥಿಕ ಚೌಕಟ್ಟಿನಲ್ಲಿಯೇ ಮುಕ್ತವಾದ ಬಾಳಿಗೆ ಒಂದು ದಾರಿಯನ್ನು ಕಲ್ಪಿಸುತ್ತಿರುವಂತೆ ತೋರುತ್ತದೆ. ಇಲ್ಲಿ ಒಂದೇ ತತ್ವ, ಒಂದೇ ಆಚರಣೆ ಎಂಬುದಿಲ್ಲ. ದ್ರಾವಿಡ ಸಂಸ್ಕೃತಿ ಪರಂಪರೆಗೆ ಸೇರಿದ ಶೈವಕ್ಕೆ ಅನೇಕ ತತ್ವಗಳು, ಆಚರಣೆಗಳು. ಒಬ್ಬೊಬ್ಬ ಭಕ್ತನ ಬದುಕಿನ ಅನನ್ಯತೆ ಒಂದೊಂದು ಮಾರ್ಗವನ್ನು ಕಲ್ಪಿಸಿಕೊಳ್ಳಲು ಇರುವ ಸ್ವಾತಂತ್ರ್ಯ ಗಮನಾರ್ಹವಾದುದು. ಶಿವಭಕ್ತಿಯೊಂದಿದ್ದರೆ ಚಕ್ರವರ್ತಿಯೂ ಪೂಜ್ಯನಾಗುತ್ತಾನೆ, ಅವನ ಜೀತದಾಳೂ ಪೂಜ್ಯನಾಗುತ್ತಾನೆ. ಬುದ್ಧನ ಕಾಲದಿಂದಲೂ ಇದೇ ಕಥೆ ಮುಂದುವರೆದುಕೊಂಡು ಬಂದಿದೆ. ಭಕ್ತಿಯ ಮುಂದೆ ನೀತಿ ಅನೀತಿ, ಪಾಪ ಪುಣ್ಯ, ಪಾವಿತ್ರ್ಯ, ಅಪಾವಿತ್ರ್ಯ, ಕಾಯಿದೆ ಕಾನೂನು ಎಲ್ಲವೂ ಸುಳ್ಳು. ಜಾತಿಯ ಮೇಲು ಕೀಳು, ಮಡಿ ಮೈಲಿಗೆಗೆ ಅರ್ಥವೇ ಬೇರೆ. ಆಯಾ ಸಂದರ್ಭ ಸನ್ನಿವೇಶಗಳೇ ನಿರ್ಣಾಯಕವಾಗುತ್ತವೆ. ಉದಾ: ನಂಬಿಯಣ್ಣ, ಮಲುಹಣ, ಸೂಳೆ ನಿಂಬೆಕ್ಕ ಮೊದಲಾದವರು ತೆಲುಗು ಜೊಮ್ಮಯ್ಯ ಮತ್ತು ಕೇಶಿರಾಜ ದಣ್ಣಾಯಕರಿಬ್ಬರೂ ಸಾಮಂತರು. ಸಮಾನ ಸಾಧಕರು. ಒಬ್ಬ ಮಾಂಸಹಾರಿ, ಇನ್ನೊಬ್ಬ ಶಾಕಾಹಾರಿ. ವಿಚಿತ್ರವೆಂದರೆ ಕಣ್ಣಪ್ಪನ ರಗಳೆಯಲ್ಲಿರುವಂತೆ ಈ ದ್ವಂದ್ವದಲ್ಲಿ ಮಾಂಸಾಹಾರಿ ಜೊಮ್ಮಯ್ಯನೇ ಗೆಲ್ಲುತ್ತಾನೆ. ಮಾಂಸಾಹಾರಿ ಶಿವಭಕ್ತನ ಮನೆಗೆ ಸಸ್ಯಾಹಾರಿ ಭಕ್ತ ಬಂದಾಗ ಅವನಿಗೆ ಸಸ್ಯಾಹಾರವನ್ನೇ ನೀಡಲಾಗುತ್ತದೆ. ಅದರಿಂದ ಆತ ತೃಪ್ತನೂ ಆಗುತ್ತಾನೆ. ಹೀಗೆ ಆಹಾರ ಸಮಸ್ಯೆ ಬಗೆಹರಿಯುತ್ತದೆ. ಒಂದು ರೀತಿಯಿಂದ ಕಾಯಕವೇ ಭಕ್ತಿ. ಕಾಯಕ ಯಾವುದಾದರೂ ಸರಿಯೇ ಪವಿತ್ರ ; ಎಂಬ ನಿಲುವು ಇರುವುದರಿಂದ ಬೇಡರ ಕಣ್ಣಪ್ಪನೂ ಶಿವಭಕ್ತ, ಪೂಜ್ಯ: ಮೀನುಗಾರ ಅತಿಭಕ್ತನೂ ಪೂಜ್ಯ: ತೆಲುಗು

ಜೊಮ್ಮಯ್ಯನೂ ಪೂಜ್ಯ. ಕಾಯಕವನ್ನು ಕೈಲಾಸವನ್ನಾಗಿ ಮಾಡಿಕೊಳ್ಳುವ ವೀರನಿಷ್ಠೆಯಷ್ಟೇ ಪ್ರಮುಖವಾದುದು ಎಂಬುದು ಇಲ್ಲಿಯ ನೀತಿ.

ವೈದಿಕಶಾಹಿ ಕಲ್ಪಿಸಿದ ಸಾಮಾಜಿಕ ನೀತಿಗಳಿಗೆ ಶೈವ, ವೀರಶೈವ ಪರಂಪರೆಗಳು ಹುಟ್ಟುಹಾಕಿದ ಸಾಮಾಜಿಕ ನೀತಿಗಳು ತದ್ವಿರುದ್ಧವಾಗುತ್ತವೆ. ಹೀಗೆ ಭಾರತದ ಚರಿತ್ರೆಯುದ್ದಕ್ಕೂ ಮುಕ್ತತೆ, ಮತ್ತು ಚಲನೆಯ ಅವಕಾಶಗಳು ಇದ್ದೇ ಇದ್ದವು. ದ್ರಾವಿಡ ಸಾಮಾಜಿಕ ನೈತಿಕತೆಗೆ ಅತ್ಯಂತ ಸಹಜವಾಗಿ ಹೊಂದಿಕೊಳ್ಳುತ್ತಿದ್ದ ಶೈವ ತತ್ವ ವೈದಿಕಶಾಹಿ ಹುಟ್ಟುಹಾಕಿದ ವರ್ಗ ವರ್ಣಪೀಡಿತ ಸಮಾಜಕ್ಕೆ ಹೊಂದಲಿಲ್ಲ. ಹಾಗಾಗಿ ಅದು ಅವಧೂತಿಕೆ, ಪವಾಡಗಳ, ಅತಿರೇಖಗಳ, ಅಲೌಕಿಕ ಘಟನೆಗಳ ವ್ಯಕ್ತಿಗತ ಸಾಹಸಗಳ ಕತೆಯಾಗಿ ರೂಪುಗೊಳ್ಳುತ್ತದೆ.

✦✦✦

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ.

ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆ ಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಬದುಕಿಸಬೇಕಾಗಿದೆ, ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶ ಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, ಅದನ್ನು ತನ್ನ ಪ್ರಸಾರಾಂಗದ ಮೂಲಕ ಪ್ರಧಾನವಾಗಿ ಪೂರೈಸುತ್ತಲಿದೆ. ಈ ನಿಟ್ಟಿನಲ್ಲಿ ಪ್ರಕಟವಾದ ಪುಸ್ತಕ 'ಹರಿಹರ ಚಿತ್ರಿಸಿದ ದಲಿತ ಶರಣರು.'

ಪ್ರೊ. ಎಸ್. ಎಸ್. ಹಿರೇಮಠ ಅವರು 'ಹರಿಹರ ಚಿತ್ರಿಸಿದ ದಲಿತ ಶರಣರು.' ಕುರಿತು ಮಂಟಪಮಾಲೆ ಉಪನ್ಯಾಸವನ್ನು ನೀಡಿದ್ದಾರೆ. ಇದಕ್ಕಾಗಿ ಅವರಿಗೆ ಕನ್ನಡ ವಿಶ್ವವಿದ್ಯಾಲಯ ಕೃತಜ್ಞವಾಗಿದೆ.

ಡಾ. ಎಂ.ಎಂ.ಕಲಬುರ್ಗಿ
ಕುಲಪತಿಗಳು

ಮಂಟಪ ಮಾಲೆ- ೪೪